ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

೧೦ನೇ ವರ್ಷ ೧೧ನೇ ಸಂಚಿಕೆ ಬೆಲೆ ೧-೦೦ ರೂ

ಕೊಪ್ಪ ೩೧ ೩-೧೯[illegible] ಧಾನೇನಾಂಕ ದೂರವಾಣಿ ೧೧೪

ಯುವಕನಿಗೆ ಇರಿದು ತಲೆಮರೆಸಿಕೊಂಡಿರುವ ಕೆರೆಕಟ್ಟೆ ರವಿಯ ಮತ್ತೊಂದು ಪ್ರಕರಣ

ಶೃಂಗೇರಿ : ಕಳೆದ ಜನವರಿ ೭ರಂದು ಇಲ್ಲಿ ಧಾಂಧಲೆ ಎಬ್ಬಿಸಿ, ಪೋಲೀಸರಿಗೆ ಚೂರಿ ತೋರಿಸಿ ಗಲಭೆ ಮಾಡಿದ್ದ ರವಿ ಮಾನೆ ಹಾಲ್ಯಕ್ಕಿ ರವಿ ನಾಯ್ಕ ಮೊನ್ನೆ ಮಾರ್ಚ್ ೨೮ ರಂದು ನೆಮ್ಮಾರು ಮಂಡಲ ಸದಸ್ಯರಾದ ಕೆರೆಕಟ್ಟೆ ರಾಮಚಂದ್ರ ಹೆಬ್ಬಾರರ ಮಗ ಶ್ರೀಧರ ಎಂಬ ಯುವಕನಿಗೆ ಚೂರಿಯಿಂದ ಇರಿದು ತಲೆ ಮರೆಸಿಕೊಂಡಿದ್ದಾನೆ. ಶ್ರೀಧರ ಹಾಗೂ ಹೀಗೂ ಪ್ರಾಣಾಪಾಯದಿಂದ ಪಾರಾಗಿ, ಮಣಿಪಾಲದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ.

ಕೆರೆಕಟ್ಟೆಯಲ್ಲಿ ರವಿಯ ಕುಮ್ಮಕ್ಕು ಜನರ ಗ್ಯಾಂಗಿನಲ್ಲಿ ಸೇರಿರುವನೆನ್ನಲಾದ ತನ್ನ ಹತ್ತಿರದ ಬಂಧುವೊಬ್ಬನಿಗೆ ಶ್ರೀಧರ ಬುದ್ಧಿವಾದ ಹೇಳಿದ್ದೇ ಹಲ್ಲೆಗೆ ಕಾರಣ ಎನ್ನಲಾಗಿದೆ.

ಹಂತಹಂತವಾಗಿ ಹೆಚ್ಚೆಚ್ಚು ಅಪಾಯಕರವಾಗಿ ಬೆಳೆಯುತ್ತಿರುವ ಈತನಿಗೆ ಬೆಂಬಲಕ್ಕಾಗಿರುವ ಕೆಲವು ದುಷ್ಟ ರಾಜಕೀಯ ಶಕ್ತಿಗಳು, "ಆತನಿಗೆ ಏನೂ ಮಾಡಬೇಡಿ ಹಾಜರುಪಡಿಸುತ್ತೇವೆ" ಎಂದು ಸಬ್ ಇನ್ಸ್‌ಪೆಕ್ಟರಿಗೆ ತಿಳಿಸಿದ್ದಾರೆನ್ನಲಾಗಿದೆ.

ಈತನನ್ನು ಏನಾದರೂ ಮಾಡಿ ಹಿಡಿಯಲು ಹಗಲೂ ರಾತ್ರಿ ಎಂಬಂತೆ ಯತ್ನಿಸುತ್ತಿರುವ ಸಬ್ ಇನ್ಸ್‌ಪೆಕ್ಟರು ಸಿಬ್ಬಂದಿ ಪೊಲೀಸರಿಗೆ ಛಳಿಸಿದ್ದು, ಈತನ ಪಾಡಿಗೆ ಕೈ ಮುರಿದಿದೆ ಹಾಗೂ ಇನ್ನೊಬ್ಬ ಹುಡುಗಿಯ ಕಂಠಕ್ಕೆ ರಕ್ತ ಹೆಪ್ಪುಗಟ್ಟಿದೆ ಎಂದು ಮುಂತಾಗಿ ದೌರ್ಜನ್ಯದ ವರದಿಗಳು ಕೇಳಿ ಬಂದಿದೆ.

ಒಂದೆಡೆ ಈತನ ಭಯ, ಮತ್ತೊಂದೆಡೆ ಪೋಲೀಸರ ಭಯದಿಂದಾಗಿ ಆ ಭಾಗದ ಅತ್ಯಂತ ಮುಗ್ಧರಾದ ಜನ ತತ್ತರಿಸಿದ್ದಾರೆ.

ಕುಟುಂಬ ಯೋಜನೆ ಲಾಟರಿ: ಶೃಂಗೇರಿ ತಾಲ್ಲೂಕಿಗೆ ೨ ಪ್ರಥಮ ಬಹುಮಾನ

ಶೃಂಗೇರಿ : ಇಲ್ಲಿ ಜನವರಿ ಮತ್ತು ಫೆಬ್ರವರಿಯಲ್ಲಿ ನಡೆದ ಕುಟುಂಬ ಯೋಜನಾ ಶಿಬಿರದಲ್ಲಿ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡ ಶ್ರೀಮತಿ ಪ್ರೇಮಾ ಕೋಂ ಆನಂದ, ಬಿದರಗೋಡು ಹಾಗೂ ಶ್ರೀಮತಿ ಜಯಮ್ಮ ಕೋಂ ಬಾಬಯ್ಯ, ಅಲಗೋಡು, ಧರೆಕೊಪ್ಪ ಇವರಿಗೆ ಜಿಲ್ಲಾ ಮಟ್ಟದ ಕುಟುಂಬ ಕಲ್ಯಾಣ ಯೋಜನೆ ಲಾಟರಿ ಡ್ರಾದಲ್ಲಿ ತಲಾ ೫೦೦೦ ರೂ ಗಳ ಪ್ರಥಮ ಬಹುಮಾನ ಲಭಿಸಿದೆ ಎಂದು ವೈದ್ಯಾಧಿಕಾರಿ ಡಾ॥ ಲಕ್ಷ್ಮೀನಾರಾಯಣ ತಿಳಿಸಿದ್ದಾರೆ.

ಕೊಪ್ಪದಲ್ಲಿ ಕೋರ್ಟ್ ಆರಂಭ

ಕೊಪ್ಪ : ಒಂದು ದಶಕಕ್ಕೂ ಹೆಚ್ಚು ಕಾಲದಿಂದ ಹಲವಾರು ಅಡೆತಡೆಗಳನ್ನು ದಾಟಿ ಬಂದು ಕಡೆಗೂ ಮಂಜೂರಾದ ಮುನ್ಸಿಫ್ ನ್ಯಾಯಾಲಯದ ಉದ್ಘಾಟನೆ ಇಲ್ಲಿ ಮಾರ್ಚ್ ೨೫ರಂದು ನೆರವೇರಿತು.

ಉದ್ಘಾಟನೆ ನೆರವೇರಿಸಿದ ಹೈ ಕೋರ್ಟಿನ ನ್ಯಾಯಾಧೀಶರಾದ ಕೆ. ರಾಮಚಂದ್ರಯ್ಯ ಅವರು, ಇಂದು ನ್ಯಾಯಾಲಯಗಳಲ್ಲಿ ನ್ಯಾಯ ವಿತರಣೆಯಲ್ಲಿ ತುಂಬಾ ವಿಳಂಬವಾಗುತ್ತಿರುವುದನ್ನು ಪ್ರಸ್ತಾಪಿಸಿ, ಇದರಿಂದ ನ್ಯಾಯಾಲಯಗಳ ಪಾವಿತ್ರ್ಯ ಕೆಡುತ್ತದೆ; ನ್ಯಾಯಾಲಯಗಳಲ್ಲಿ ಜನರಿಗೆ ನಂಬಿಕೆ ಕಡಿಮೆಯಾಗುತ್ತದೆ ಎಂದರು

ವಾಯಿದೆ ಕೇಳುವುದೇ ವಕೀಲರ ಕಸಬು ಆಗಬಾರದು ಅನಗತ್ಯವಾಗಿ ವಾಯಿದೆ ಕೇಳದೆ, ಯಾವ ಪ್ರಕರಣ ಕೈಗೆತ್ತಿಕೊಂಡರೂ "ಸಿದ್ಧ" ಎಂಬ ಉತ್ತರ ಬರಬೇಕು ಎಂದೂ ಅವರು ಕರೆ ನೀಡಿದರು

ಮುಖ್ಯ ಅತಿಥಿಯಾಗಿದ್ದ ಸರ್ಕಾರದ ನ್ಯಾಯಾಂಗ ಇಲಾಖೆಯ ಕಾರ್ಯದರ್ಶಿ ಈಶ್ವರ ಭಟ್‌ರವರು ಮಾತನಾಡಿ, ನ್ಯಾಯಾಲಯಗಳು ಮನುಷ್ಯನ ಮಾನಸಿಕ ಅನಾರೋಗ್ಯಕ್ಕೆ ಹಿಡಿದ ಕನ್ನಡಿಯಂತೆ. ನ್ಯಾಯಾಲಯಗಳ ಅಗತ್ಯವೇ ಇಲ್ಲದಂಥ ಪರಿಸ್ಥಿತಿ ನಮ್ಮಲ್ಲಿ ಸೃಷ್ಟಿಯಾಗಬೇಕು ಎಂದು ಆಶಿಸಿದರು

ವಿಧಾನಸಭಾಧ್ಯಕ್ಷ ಎಸ್. ಎಂ. ಕೃಷ್ಣರವರ ಗೈರು ಹಾಜರಿಯ ಕಾರಣ, ಶಾಸಕ ಶಾಮಣ್ಣನವರ ಅಧ್ಯಕ್ಷತೆಯಲ್ಲಿ ನಡೆದ ಸಡಗರದ ಸಮಾರಂಭದಲ್ಲಿ, ಕಾನೂನು ಮಂತ್ರಿ ಬಿ. ಶಿವಣ್ಣ ವಕೀಲರ ಸಂಘವನ್ನು (ಬಾರ್ ಅಸೋಸಿಯೇಶನ್) ಉದ್ಘಾಟಿಸಿದರು. ಸಣ್ಣ ನೀರಾವರಿ ಮಂತ್ರಿ ಮಲ್ಲಿಕಾರ್ಜುನ ಪ್ರಸನ್ನ, ಎಂ. ಡಿ. ಬಾಲಕೃಷ್ಣ, ಬಿ.ಎಲ್. ರಾಮದಾಸ್, ಜಿಲ್ಲಾ ನ್ಯಾಯಾಧೀಶರಾದ ಬಿ. ಕೆ. ಸಂಗಳದ, ಕೊಪ್ಪದ ಮುನ್ಸಿಫ್ ನ್ಯಾಯಾಧೀಶರಾದ ಬಿ. ಎಂ. ಮಲ್ಲಿಕಾರ್ಜುನಯ್ಯ — ಮುಖ್ಯ ಅತಿಥಿಗಳಾಗಿ ಮಾತನಾಡಿದರು.

ಓ ಬಿ ವಿವೇಕ್ ಸ್ವಾಗತಿಸಿದರು. ವಕೀಲ ಎಚ್. ಡಿ. ನಾಯಕ್ ಅತಿಥಿಗಳನ್ನು ಪರಿಚಯಿಸಿದರು. ಚಾಮರಾಜ್ ಕಾರ್ಯಕ್ರಮ ನಿರೂಪಿಸಿದರು. ಎ. ಸಿ. ವಜ್ರಪ್ಪ ವಂದಿಸಿದರು.

ಅನಂತರ ನ್ಯಾಯಾಲಯದ ಕಾರ್ಯಕಲಾಪಗಳು ನಡೆದು, ಮುನ್ಸಿಫ್ ನ್ಯಾಯಾಧೀಶರು ಹಲವು ಪ್ರಕರಣಗಳನ್ನು ವಿಲೇವಾರಿ ಮಾಡಿದರು.

ಕೊಪ್ಪ ಆಯುರ್ವೇದ ಕಾಲೇಜು ಮಾನ್ಯತೆ ರದ್ದು ?

ಕೊಪ್ಪ : ಹೇಗಾದರೂ ಇಲ್ಲಿನ ಆಯುರ್ವೇದ ಕಾಲೇಜಿನ ಮಾನ್ಯತೆ ಉಳಿಸಿಕೊಳ್ಳಬೇಕೆಂದು ಊರಿನ ಜನ ಯತ್ನಿಸುತ್ತಿರುವಂತೆಯೇ ಕುವೆಂಪು ವಿವಿಯು ಕಾಲೇಜಿಗೆ ಮಾನ್ಯತೆಯನ್ನು ರದ್ದುಪಡಿಸಿರುವುದಾಗಿ ವರದಿಯಾಗಿದೆ.

ಈ ಸಂಬಂಧ ಅಧಿಕೃತ ವರದಿ ಕಾಲೇಜಿಗೆ ಇನ್ನೂ ಬಂದಿಲ್ಲವೆನ್ನಲಾಗಿದ್ದು, ಗೊಂದಲ ತೀವ್ರಗೊಂಡಿದೆ.

ಪದಾಧಿಕಾರಿಗಳು

ಹುಲಿಗಾರ್ ಗ್ರಾಮದ ಸೋಮವಾರಸಿಗೆಯ ಕಪಿಲೇಶ್ವರ ಯುವಕ ಕಲಾ ಸಂಘದ ನೂತನ ಪದಾಧಿಕಾರಿಗಳು : ಎಚ್. ಆರ್. ಉದಯಕುಮಾರ್ (ಅಧ್ಯಕ್ಷ), ಎಚ್. ಎಲ್. ಪುಟ್ಟಸ್ವಾಮಿ (ಉಪಾಧ್ಯಕ್ಷ), ಎಚ್. ಜಿ. ವೆಂಕಟೇಶ್ (ಕಾರ್ಯದರ್ಶಿ), ಕೆ. ಎಚ್. ಟೈಲರ್ (ಖಜಾಂಚಿ), ಶಿವಲಿಂಗ ಮೆನೇಜರ್ (ಸಲಹೆಗಾರರು.)

'ಬದುಕು ಬಳಗ'ದಿಂದ ಕೊಪ್ಪದಲ್ಲಿ ಏಪ್ರಿಲ್ ೭ರಂದು ನೀಗ್ರೋ ಗುಲಾಮರ ಬದುಕು ಕುರಿತ 'ರೂಟ್ಸ್' ಚಿತ್ರದ ವಿಡಿಯೊ ಪ್ರದರ್ಶನ

ಕೊಪ್ಪ : 'ಬದುಕು ಬಳಗ'ದ ಆಶ್ರಯದಲ್ಲಿ ಇಲ್ಲಿನ ಟೌನ್ ಮಾಧ್ಯಮಿಕ ಶಾಲೆಯಲ್ಲಿ ಏಪ್ರಿಲ್ ೭ರ ಬೆಳಗ್ಗೆ ೧೦.೩೦ ಗಂಟೆಗೆ ಸರಿಯಾಗಿ ಅಲೆಕ್ಸ್ ಹ್ಯಾಲಿಯ "ರೂಟ್ಸ್" ಎಂಬ ಇಂಗ್ಲಿಷ್ ಚಲನ ಚಿತ್ರದ ವಿಡಿಯೊ ಪ್ರದರ್ಶನವಿದೆ.

ಆಫ್ರಿಕಾದ ಬುಡಕಟ್ಟು ಜನರ ಸಮೃದ್ಧ ಜೀವನ ಮೌಲ್ಯಗಳು, ಅವರನ್ನು ಎಳೆತಂದು ಪಶುಗಳಂತೆ ಮಾರಾಟ ಮಾಡಿ, ಹಿಂಸಿಸಿದ, ತಾವು ನಾಗರಿಕರೆಂದುಕೊಂಡ ಬ್ರಿಟಿಷ್ ಮತ್ತು ಅಮೆರಿಕನ್ನರ ಬರ್ಬರತೆ, ಸ್ವಾತಂತ್ರ್ಯಕ್ಕಾಗಿ ಪೀಳಿಗೆಯಿಂದ ಪೀಳಿಗೆಗೆ ಗುಲಾಮರ ತುಡಿತ ಮುಂತಾದುವುಗಳ ಮನೋಜ್ಞ ಚಿತ್ರಣವೇ ಈ ಚಿತ್ರದ ಕಥಾವಸ್ತು.

ಬಳಗದ ಸದಸ್ಯರಲ್ಲದೆ ಇತರ ಆಸಕ್ತರಿಗೂ ಸ್ವಾಗತವಿದೆ.

ಕುಂದಾದ್ರಿ ಬೆಟ್ಟದಲ್ಲಿ ಶಿಲಾರೋಹಣ ಶಿಬಿರ

ಶೃಂಗೇರಿ ನೇಚರ್ ಅಡ್ವೆಂಚರ್ ಕ್ಲಬ್‌ನವರು, ಬೆಂಗಳೂರಿನ 'ಜನರಲ್ ತಿಮ್ಮಯ್ಯ ನ್ಯಾಷನಲ್ ಅಕಾಡೆಮಿ ಆಫ್ ಅಡ್ವೆಂಚರ್' ಇವರ ಸಹಕಾರದಿಂದ ಶಿವಮೊಗ್ಗ ಹಾಗೂ ಚಿಕ್ಕಮಗಳೂರು ಜಿಲ್ಲೆಯ, ೧೬ರಿಂದ ೩೫ರ ವಯೋಮಾನದ ಗ್ರಾಮೀಣ ಯುವಕ-ಯುವತಿಯರಿಗಾಗಿ ಏಪ್ರಿಲ್ ತಿಂಗಳ ೧೮ರಿಂದ ೨೧ ರವರೆಗೆ ಕುಂದಾದ್ರಿ ಬೆಟ್ಟದಲ್ಲಿ ಶಿಲಾರೋಹಣ ಶಿಬಿರವನ್ನು ಯೋಜಿಸಿರುವರು. ಈ ಶಿಬಿರದಲ್ಲಿ ಭಾಗವಹಿಸಲು ೩೦ ಮಂದಿಗೆ ಮಾತ್ರ ಅವಕಾಶವಿದ್ದು, ಆಸಕ್ತಿ ಇರುವವರು ಹೆಚ್ಚಿನ ಮಾಹಿತಿಗಾಗಿ ಡಾ॥ ಜಿ ಕೆ ಭಟ್, 'ಸ್ನೇಹ' ಸಂಚಾಲಕರು, ಜೆ ಸಿ ಬಿ ಎಂ ಕಾಲೇಜು, ಶೃಂಗೇರಿ ಇವರನ್ನು ಏಪ್ರಿಲ್ ೧೦ ನೇ ತಾರೀಕಿನೊಳಗೆ ವೈಯಕ್ತಿಕವಾಗಿ ಅಥವಾ ಪತ್ರಮುಖೇನ ಸಂಪರ್ಕಿಸಬಹುದು.

ಯಕ್ಷಗಾನ ಧ್ವನಿ ಸುರಳಿ ಬಿಡುಗಡೆ

ಕಮ್ಮರಡಿ : ಇಲ್ಲಿನ ರಥೋತ್ಸವ ಸಮಯದಲ್ಲಿ ಮಾ. ೨೧ ರಂದು "ಕಮ್ಮರಡಿ ಕ್ಷೇತ್ರ ಮಹಾತ್ಮೆ" ಎಂಬ ಪೌರಾಣಿಕ ಯಕ್ಷಗಾನದ ಧ್ವನಿ ಸುರುಳಿಯನ್ನು ದೇವಸ್ಥಾನದ ಸಂಚಾಲಕರಾದ ಶಿವರಾಮ ಜೋಯ್ಸರ ಅಧ್ಯಕ್ಷತೆಯಲ್ಲಿ ಕೆ. ಎಂ. ಶ್ರೀನಿವಾಸ ಭಟ್ ಬಿಡುಗಡೆ ಮಾಡಿದರು

ಇಲ್ಲಿನ ಶ್ರೀದೇವಿ ಭವನದ ಕೃಷ್ಣಮೂರ್ತಿ ಹೆಬ್ಬಾರ್ ರಚಿಸಿರುವ ಈ ಯಕ್ಷಗಾನದ ಧ್ವನಿ ಸುರುಳಿಯಲ್ಲಿ ಭಾಗವಹಿಸಿದವರು : ಭಾಗವತಿಕೆ : ಎಚ್. ಜಿ. ಶಿವಶಂಕರ್, ಮದ್ದಳೆ : ಹುಲ್ಕುಗ್ರು ಗಣೇಶಮೂರ್ತಿ, ಚಂಡೆ : ಎಂ. ಎಸ್. ಜನಾರ್ದನ, ಅರ್ಥಧಾರಿಗಳು : ಶ್ರೀಪಾದ ಜೋಯ್ಸ್, ಎಂ. ವಿ ರಾಮಚಂದ್ರ, ಎ. ಎ. ಶೇಷಾದ್ರಿ ಭಟ್, ಕೆ. ಎಲ್. ಲಕ್ಷ್ಮೀನಾರಾಯಣ ರಾವ್, ಕೃಷ್ಣಮೂರ್ತಿ ಹೆಬ್ಬಾರ್, ಜನಾರ್ದನ, ಕೆ ಎಸ್ ನಂದೀಶ ಮತ್ತು ಇತರರು.

ಕಟ್ಟಿ ಬೆಳೆಸಲಾಗದಿದ್ದರೂ ಕುಟ್ಟಿ ಕೆಡವಲೇನು?!

—ರಾಜಕೀಯ ಜಂತುಗಳು ಉಸಿರುಕಟ್ಟಿಸಿ ಕೊಂದ ಒಂದು ದ್ವಾಕ್ರಾ ಘಟಕದ ಕರ್ಮಕಥೆ

ರಾಜ್ಯದ ನೂರಾರು ದ್ವಾಕ್ರಾ ಘಟಕಗಳ ಪೈಕಿ ಉತ್ತಮವಾಗಿ ನಡೆಯುತ್ತಿರುವ ಕೇವಲ ನಾಲ್ಕೈದು ಘಟಕಗಳಲ್ಲಿ ಕೊಪ್ಪ ತಾಲ್ಲೂಕು ಅಸಗೋಡಿನ ಶಿಶು ಆಹಾರ ಘಟಕ ಮೊದಲ ಸಾಲಿನಲ್ಲಿದೆ. ಆದರೆ ಒಳ್ಳೆಯದೇನನ್ನೂ ಹುಟ್ಟಲು, ಬೆಳೆಯಲು ಬಿಡದ ನಮ್ಮ ರಾಜಕೀಯ ವಿಷ ಜಂತುಗಳು ಜಿಲ್ಲಾ ಪರಿಷತ್ತಿನ ಮೂಲಕ ಅದನ್ನು ಪರೋಕ್ಷವಾಗಿ, 'ಟೆಕ್ನಿಕಲ್' ಆಗಿ ಮುಚ್ಚಿಸುವಂಥ ಕ್ರಮ ಕೈಗೊಳ್ಳುವಲ್ಲಿ ಯಶಸ್ವಿಯಾಗಿವೆ

ಜಿಲ್ಲಾ ಪರಿಷತ್ತಿನ ಇಂಥ ನಾಚಿಕೆಗೆಟ್ಟ ನಡವಳಿಕೆಯ ವರದಿ ಮತ್ತು ಈ ದ್ವಾಕ್ರಾ ಘಟಕದ ಆಗುಹೋಗುಗಳನ್ನು ಕುರಿತ ಆದಷ್ಟು ಸಂಕ್ಷಿಪ್ತವಾದ ವಿವರ ಇಲ್ಲಿದೆ.

ವಿಶ್ವಸಂಸ್ಥೆಯ ಅಂತರರಾಷ್ಟ್ರೀಯ ಮಕ್ಕಳ ತುರ್ತು ನಿಧಿಯ ('ಯುನಿಸೆಫ್') ನೆರವಿನಿಂದ ನಮ್ಮ ರಾಜ್ಯದಲ್ಲಿ ಚಾಲನೆಗೆ ಬಂದ 'ದ್ವಾಕ್ರಾ' (ಗ್ರಾಮೀಣ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ) ಯೋಜನೆಯ ಅಡಿ ಕೊಪ್ಪ ತಾಲ್ಲೂಕಿನಲ್ಲೂ ಹಲವು (ಸುಮಾರು ೨೦) ಉತ್ಪಾದನಾ ಘಟಕಗಳು ತಲೆ ಎತ್ತಿ ಐದಾರು ವರ್ಷಗಳೇ ಆದವು.

ಆದರೆ ಯೋಜನೆಗಳೇನಿದ್ದರೂ ರಾಜಕಾರಣಿಗಳಿಗೆ ಚುನಾವಣಾ ಪ್ರಚಾರ ಸಾಧನಗಳಾಗಿಯೂ, ಅಧಿಕಾರಿಗಳಿಗೆ 'ಪ್ರಗತಿ'ಯ ಅಂಕಿ-ಅಂಶಗಳಾಗಿಯೂ, ಉಳಿದಂತೆ ಇಬ್ಬರಿಗೂ ಹಾಲಿನ ಬದಲು ಹಣ ಕರೆಯುವ ಕಾಮಧೇನುಗಳಾಗಿಯೂ ಬಳಕೆಯಾಗುವ ಈ ಪ್ರಾಚೀನ ದೇಶದಲ್ಲಿ, ಈ ದ್ವಾಕ್ರಾ ಘಟಕಗಳು ಬೇರೆಯಾಗಿ ಉಳಿಯಲು ಹೇಗೆ ಸಾಧ್ಯ? ಹೀಗಾಗಿ ಆ ಇಪ್ಪತ್ತು ಘಟಕಗಳೂ ಇಂದು ಸರ್ಕಾರಿ ಕಡತಗಳಲ್ಲಿ ಮಾತ್ರ ಯಶಸ್ವಿಯಾಗಿ ವಿಜೃಂಭಿಸುತ್ತಿವೆ. ಇನ್ನು ಕೆಲ ದಿನಗಳಲ್ಲಿ ಅಲ್ಲಿಂದಲೂ ಅಳಿಸಿ ಹೋದಾವು.

ಆದರೆ ಈ ನಿಯಮಕ್ಕೆ ಅಪವಾದವೆಂಬಂತೆ ಬೆಳೆದು ಬಂದ ಹೊಸಕೊಪ್ಪದ ಅಸಗೋಡಿನ ಶ್ರೀ ಶಕ್ತಿ ಶಿಶು ಆಹಾರ ಉತ್ಪಾದನಾ ಘಟಕ ರಾಜ್ಯ ಮಟ್ಟದಲ್ಲೇ ಒಳ್ಳೆಯ ಹೆಸರು ಗಳಿಸಿ, ಸೂಕ್ತ ಮಾರ್ಗದರ್ಶನ ಹಾಗೂ ಫಲಾನುಭವಿಗಳ ಇಚ್ಛಾಶಕ್ತಿಯಿದ್ದರೆ ಏನನ್ನು ಬೇಕಾದರೂ ಯಶಸ್ವಿಗೊಳಿಸಬಹುದೆಂದು ಸಾಬೀತುಪಡಿಸುವಂತೆ ಮಾದರಿಯಾಗಿತ್ತು.

ಇತ್ತು, ಅಷ್ಟೆ. ಇನ್ನಿಲ್ಲ. ಏಕೆಂದರೆ, ಪಟ್ಟಭದ್ರ ಹಿತಾಸಕ್ತಿಯ ರಾಜಕಾರಣಿಗಳೆಂಬ ಕ್ಯಾನ್ಸರ್ ಕ್ರಿಮಿಗಳ ರೂಪ ಧರಿಸಿ ಒಳಹೊಕ್ಕು ಈ ಘಟಕವನ್ನು ಇಂದು ನಿಶ್ಚೇಷ್ಟಿತಗೊಳಿಸಿಬಿಟ್ಟಿದೆ

ತಾ|| ೨೦ ೩ ೮೫ರಲ್ಲಿ ೧೨ ಜನ ಮಹಿಳೆಯರಿಗೆ ತಲಾ ೫ ಸಾವಿರ ರೂ ಸಾಲ ನೀಡಿ, ಅಲ್ಲಿನ ಮಹಿಳಾ ಸಮಾಜದ ಆಶ್ರಯದಲ್ಲಿ ತಾಲ್ಲೂಕಿನಲ್ಲೇ ಮೊಟ್ಟ ಮೊದಲಾಗಿ ಈ ಘಟಕ ಸ್ಥಾಪಿಸಲಾಯಿತು.

ಆದರೆ ಅದಕ್ಕೆ ಬೇಕಾದ ವಿದ್ಯುತ್ ಸೌಕರ್ಯ ಮತ್ತಿತರ ಏರ್ಪಾಡುಗಳಿಗಾಗಿ ಫಲಾನುಭವಿಗಳು ಚಳುವಳಿಯನ್ನೇ ಮಾಡಬೇಕಾಗಿ ಬಂದು, ಅಂತೂ ತಾ|| ೨೮-೧೨-೮೫ರಲ್ಲಿ ಘಟಕ ಉತ್ಪಾದನೆ ಆರಂಭಿಸಿತು. ಆಗ ಈ ಶಿಶು ಆಹಾರಕ್ಕೆ ಕ್ವಿಂಟಾಲಿಗೆ ೬೭೦ ರೂ ಗಳಂತೆ ಸಮಾಜ ಕಲ್ಯಾಣ ಇಲಾಖೆ ಬೆಲೆ ನಿಗದಿ ಮಾಡಿತು.

ಅದಾಗಿ ಕೇವಲ ಒಂದೇ ವರ್ಷದಲ್ಲಿ ಇನ್ನೂ ೧೨ ಜನರ ಇನ್ನೊಂದು ತಂಡವನ್ನು ಸೇರಿಸಿಕೊಳ್ಳಲಾಯಿತು. ಫಲಾನುಭವಿಗಳ ಸತತ ಶ್ರಮದಿಂದ ಲಾಭಾಂಶವೂ ಗಣನೀಯವಾಗಿ ಬಂದು, ಎಲ್ಲರ ಸಾಲವೂ ತೀರಿ, ಎಲ್ಲರಿಗೂ ಅವರವರು ದುಡಿದ ಕೆಲಸದ ದಿನಗಳ ಲೆಕ್ಕದಂತೆ ಲಾಭವನ್ನು ಕೂಡ ಹಂಚಿಕೊಂಡರು. ಅವರೆಲ್ಲರೂ ಬಹುತೇಕ ಅನಕ್ಷರಸ್ಥ, ಕೃಷಿ ಕಾರ್ಮಿಕ ಮಹಿಳೆಯರೇ ಆಗಿದ್ದರೆಂಬುದು ಗಮನಾರ್ಹ.

ಈ ಘಟಕದ ತಾಯಿ ಸಂಸ್ಥೆಯಾದ ಅಲ್ಲಿನ ಮಹಿಳಾ ಸಮಾಜದ ಅಧ್ಯಕ್ಷೆ ಶ್ರೀಮತಿ ಜಯಲಕ್ಷ್ಮಿ ವಾಸಪ್ಪಗೌಡ ಅವರು, ಈ ಸದಸ್ಯೆಯರನ್ನೆಲ್ಲ (ಫಲಾನುಭವಿಗಳನ್ನು) ನಿಭಾಯಿಸಿಕೊಂಡು, ಸಮರ್ಥ ಮಾರ್ಗದರ್ಶನ ನೀಡಿ, ಘಟಕಕ್ಕೆ ಭದ್ರ ಅಡಿಪಾಯ ಹಾಕಿದವರು. ಹೀಗಾಗಿ, ತಾಲ್ಲೂಕಿನ ಇತರೆಲ್ಲ ಘಟಕಗಳೂ ಉಸಿರಾಡಲೂ ತಿಣುಕಾಡುತ್ತಿದ್ದ, ಕೆಲವು ಹುಟ್ಟುವ ಮೊದಲೇ ಸತ್ತೇ ಹೋಗಿದ್ದ ಪರಿಸ್ಥಿತಿಯಲ್ಲಿ, ಈ ಘಟಕ ತನ್ನ ಕಾಲ ಮೇಲೆ ನಿಂತು ನಡೆಯತೊಡಗಿತು.

ಆದರೆ ಅಷ್ಟರಲ್ಲೇ ಬಂತು ಜಿಲ್ಲಾ ಪರಿಷತ್ ಚುನಾವಣೆ. ಮೊದಲಿನಿಂದಲೂ ಜಯಲಕ್ಷ್ಮಿಯವರ ದಕ್ಷತೆ, ಕೈ ಶುದ್ಧಿಯ ಗುಣಗಳೆದುರು ಕೈಕೈ ಹಿಸುಕಿಕೊಳ್ಳುತ್ತಿದ್ದ ಸ್ಥಳೀಯರೇ ಆದ ತಾಲ್ಲೂಕಿನ ನಂ ೧ ರಾಜಕಾರಣಿ ಚಿದಂಬರ್ ಜೊತೆಗೆ, ಕುಖ್ಯಾತ ಸುಮಿತ್ರಮ್ಮನೂ ಸೇರಿಕೊಂಡು, ಈ ಘಟಕದಲ್ಲಿ-ಹಣವೇ ಇರದಿದ್ದ ಕಡೆ! – "ಹಣ ದುರುಪಯೋಗವಾಗಿದೆ" ಎಂಬ ಪುಕಾರೆತ್ತಿ, ಈ ಘಟಕವನ್ನು ತಮ್ಮ ರಾಜಕೀಯ ದಾಳವಾಗಿಸಿಕೊಂಡರು.

ಈ ಘಟಕದ ನಾಯಕಿಯಾಗಿದ್ದ, ಆದರೆ ಬಹುಶಃ ಮೈ ಬಗ್ಗಿಸಿ ದುಡಿಯುವುದಕ್ಕಿಂತ ಇತರ ವಿಷಯಗಳಲ್ಲೇ ಹೆಚ್ಚು ಪಳಗಿದಂತಿದ್ದ ರೇವತಿ, ಇಂದ್ರಾಣಿಗಳೆಂಬವರು ಈ ದಾಳದ ಕಾಯಿಗಳಾಗಿ ರಾಜಕಾರಣಿಗಳಿಗೆ

(೩ನೇ ಪುಟಕ್ಕೆ)

ಅಸಗೋಡು ದ್ವಾಕ್ರಾ ಘಟಕದ ಬಗ್ಗೆ ಜಿಲ್ಲಾ ಪರಿಷತ್ ಸಭೆಯ ನಡವಳಿಕೆಯ ವರದಿ : ಯಾರ್ಯಾರ ಬಣ್ಣ ಏನೇನು?!

ದಿನಾಂಕ ೨೩-೨-೯೧ರ ಚಿಕ್ಕಮಗಳೂರು ಜಿಲ್ಲಾ ಪರಿಷತ್ ಸಭೆ ಕೊಪ್ಪ ತಾ|| ಅಸಗೋಡು ದ್ವಾಕ್ರಾ ಶಿಶು ಆಹಾರ ತಯಾರಿಕಾ ಘಟಕದ ಬಗ್ಗೆ ನಡೆಸಿದ ನಡಾವಳಿಯ ವರದಿ :

ಬಿ. ಜಿ. ಚಿದಂಬರ್ ರವರು, ಅಸಗೋಡು ದ್ವಾಕ್ರಾ ಘಟಕದಲ್ಲಿ ತಯಾರಿಸಲ್ಪಡುವ ಪೌಷ್ಟಿಕ ಆಹಾರದ ಗುಣಮಟ್ಟವನ್ನು ಕಾಪಾಡುವ ಬಗ್ಗೆ ಆಡಳಿತಾಧಿಕಾರಿಯೊಬ್ಬರನ್ನು ನೇಮಿಸುವಂತೆ ತೀರ್ಮಾನಿಸಿರುವುದು ಸರಿಯಲ್ಲವೆಂದು ಆಕ್ಷೇಪಿಸಿದರು. ಹಿಂದೆ ತೀರ್ಮಾನಿಸಿರುವಂತೆ, ೩ ಸಂಸ್ಥೆಗಳ ಆಹಾರ ಮಾದರಿಯನ್ನು ಪರೀಕ್ಷಿಸಿ, ಒಳ್ಳೆಯ ಗುಣಮಟ್ಟದ ಆಹಾರ ಸರಬರಾಜು ಮಾಡುವ ಸಂಸ್ಥೆಯಿಂದ ಖರೀದಿಸುವಂತೆ ಒತ್ತಾಯಿಸಿದರು.

ಮೀಗ ಚಂದ್ರಶೇಖರ್ ಮಾತನಾಡುತ್ತಾ, ದ್ವಾಕ್ರಾ ಘಟಕದಲ್ಲಿ ಈಗ ಆಹಾರದ ಗುಣ ಮಟ್ಟ ಸುಧಾರಿಸಿದ್ದು, ಸದರಿ ಘಟಕದಿಂದಲೇ ಪೌಷ್ಟಿಕ ಆಹಾರವನ್ನು ಖರೀದಿಸುವುದು ಸೂಕ್ತ. ಈ ಘಟಕದಿಂದ ಪೌಷ್ಟಿಕ ಆಹಾರ ಖರೀದಿಯನ್ನು ನಿಲ್ಲಿಸಿದ್ದೇ ಆದಲ್ಲಿ, ಅದನ್ನು ಪರೋಕ್ಷವಾಗಿ ಮುಚ್ಚಿಸಿದಂತೆಯೇ ಆಗುತ್ತದೆ. ಆದರೆ ಈಗ ಅಂತಹ ಇನ್ನೊಂದು ಘಟಕವನ್ನು ಸ್ಥಾಪನೆ ಮಾಡುವುದಕ್ಕಾಗುವುದಿಲ್ಲ ಎಂದರಲ್ಲದೆ, ಈ ಘಟಕದಿಂದ ಅನೇಕ ನಿರುದ್ಯೋಗಿ ಮಹಿಳೆಯರಿಗೆ ಉದ್ಯೋಗ ಕಲ್ಪಿಸಿದಂತಾಗಿದ್ದು ಈಗ ಆಹಾರ ಖರೀದಿಸುವುದನ್ನು ನಿಲ್ಲಿಸಿದಲ್ಲಿ ಅವರಿಗೆ ತೊಂದರೆ ಮಾಡಿದಂತಾಗುತ್ತದೆಯಾದ್ದರಿಂದ ಬೇರೆಡೆಯಿಂದ ಪೌಷ್ಟಿಕ ಆಹಾರ ಖರೀದಿಸುವುದು ಸೂಕ್ತವಲ್ಲ ಎಂದರು.

ಶಾಸಕರಾದ ಯು. ಕೆ. ಶಾಮಣ್ಣ, "ದ್ವಾಕ್ರಾ ಘಟಕವನ್ನು ಮುಚ್ಚಬೇಕೆಂಬ ಇಚ್ಛೆ ಇಲ್ಲ. ಆದರೆ ಈ ಘಟಕದಲ್ಲಿ ತರಬೇತಿ ಹೊಂದಿದ ಫಲಾನುಭವಿಗಳನ್ನು ಬಿಟ್ಟು ತರಬೇತಿ ಇಲ್ಲದವರನ್ನು ನೇಮಿಸಿಕೊಂಡಿರುವುದರಿಂದ ಪೌಷ್ಟಿಕ ಆಹಾರ ತಯಾರಿಕೆಯಲ್ಲಿ ಗುಣಮಟ್ಟವು ಕಳಪೆಯದಾಗುತ್ತಿದೆಯಲ್ಲದೆ, ಈ ಘಟಕದಲ್ಲಿ ಹಣ ದುರುಪಯೋಗವಾಗಿದ್ದು, ಈಗಾಗಲೇ ೨೨,೦೦೦ ರೂ. ವಸೂಲಾಗಿದೆ. ಮೈಸೂರಿನ ಕೇಂದ್ರ ಆಹಾರ ತಂತ್ರಜ್ಞಾನ ಸಂಶೋಧನಾಲಯ (ಸಿ.ಎಫ್.ಟಿ.ಆರ್.ಐ.) ದವರು ಈ ಘಟಕದಲ್ಲಿ ತಯಾರಿಸಲ್ಪಡುವ ಪೌಷ್ಟಿಕ ಆಹಾರವನ್ನು ಪರಿಶೀಲಿಸಿ ದೃಢೀಕರಣ ನೀಡಲು ನಿರಾಕರಿಸಿದ್ದಾರೆ. ಪೌಷ್ಟಿಕ ಆಹಾರವನ್ನು ಪರಿಶೀಲಿಸಿ ದೃಢೀಕರಣ ನೀಡುವಂತೆ ಮತ್ತೊಮ್ಮೆ ಕಳಿಸುವುದು ಸೂಕ್ತ" ಎಂದು ಅಭಿಪ್ರಾಯಿಸಿದರು. ಹಾಗೂ ಚಿತ್ರದುರ್ಗ, ಅಸಗೋಡು ಮತ್ತು ಕೇರ್ ಫುಡ್ ನವರ ಪೌಷ್ಟಿಕ ಆಹಾರವನ್ನು ಸಭೆಗೆ ಪರಿಶೀಲನೆಗೆ ನೀಡಿ, ಇದರಲ್ಲಿ ಚಿತ್ರದುರ್ಗದ ಪೌಷ್ಟಿಕ ಆಹಾರವು ಉತ್ತಮ ಗುಣಮಟ್ಟದ್ದಾಗಿದ್ದು ಮಕ್ಕಳ ಆರೋಗ್ಯದ ಹಿತದೃಷ್ಟಿಯಿಂದ ಇದನ್ನೇ ಖರೀದಿಸುವುದು ಸೂಕ್ತವೆಂದು ಅಭಿಪ್ರಾಯಿಸಿದರು.

ಸಭಾಧ್ಯಕ್ಷರು ಉತ್ತರಿಸುತ್ತಾ, ಅಸಗೋಡು ದ್ವಾಕ್ರಾ ಘಟಕದ ಮಾದರಿ ಪೌಷ್ಟಿಕ ಆಹಾರವನ್ನು ಗುಣಮಟ್ಟದ ಪರಿಶೀಲನೆಗಾಗಿ ಸಿ.ಎಫ್.ಟಿ.ಆರ್.ಐ.ಗೆ ಕಳಿಸಲಾಗಿ, ಈ ಫಲಾನುಭವಿಗಳು ತರಬೇತಿ ಹೊಂದಿ ಸಿ.ಎಫ್.ಟಿ.ಆರ್.ಐ.ನ ಅರ್ಹತಾ ಪತ್ರವನ್ನು ಪಡೆಯದಿರುವುದು, ಅಲ್ಲಿನ ಸೂತ್ರದ ಪ್ರಕಾರ ಆಹಾರ ತಯಾರಿಸದಿರುವುದು, ಇವೇ ಮುಂತಾದ ಕಾನೂನಿನ ತಾಂತ್ರಿಕ ಕಾರಣ ಅದರ ಪರೀಕ್ಷೆಗೆ ನಿರಾಕರಿಸಿ ಪತ್ರ ಬರೆದಿರುವುದಾಗಿ ತಿಳಿಸಿದರು.

ಈ ಘಟಕದವರಿಗೆ ಗುಣಮಟ್ಟ ಸುಧಾರಿಸುವಂತೆ ಹಲವು ಬಾರಿ ತಿಳುವಳಿಕೆ ನೀಡಿದ್ದರೂ ಸುಧಾರಿಸಿಲ್ಲವಾದ್ದರಿಂದ ಘಟಕ ಫಲಾನುಭವಿಗಳು ಸಹ ಸಿ.ಎಫ್.ಟಿ.ಆರ್.ಐ.ನಿಂದ ತರಬೇತಿ ಪಡೆದು, ಅರ್ಹತಾಪತ್ರವನ್ನು ಪಡೆದು ಒಂದು ಸೂತ್ರವನ್ನು ಸರಿಯಾಗಿ ಅನುಸರಿಸಿ, ಪೌಷ್ಟಿಕ ಆಹಾರವನ್ನು ತಯಾರಿಸಿದಲ್ಲಿ ಅವರಿಂದಲೇ ಪೌಷ್ಟಿಕ ಆಹಾರವನ್ನು ಖರೀದಿಸಬಹುದೆಂದರು.

(೩ನೇ ಪುಟಕ್ಕೆ)

'ಮುಂಜಾವು' ಪತ್ರಿಕೆಯ ಮಾಲೀಕತ್ವ ಮತ್ತಿತರ ವಿವರ

ಫಾರಂ. ನಂ. IV (ರೂಲ್ ೮ ನೋಡಿ)

೧. ಪ್ರಕಟಣೆಯ ಸ್ಥಳ : ಕೊಪ್ಪ, ಚಿಕ್ಕಮಗಳೂರು ಜಿಲ್ಲೆ.
೨ ಪ್ರಕಟಣೆಯ ಅವಧಿ : ಪಾಂಕ್ಷಿಕ(?) ಪಾಕ್ಷಿಕ
೩. ಭಾಷೆ : ಕನ್ನಡ
೪. ಸಂಪಾದಕ, ಮುದ್ರಕ ಮತ್ತು ಪ್ರಕಾಶಕರ ಹೆಸರು, ರಾಷ್ಟ್ರ, ವಿಳಾಸ : ಸಿರಿಮನೆ ನಾಗರಾಜ್, ಭಾರತೀಯ, ೧೧೨೮, ತ್ಯಾಗರಾಜ ರಸ್ತೆ, ಕೊಪ್ಪ, ಚಿಕ್ಕಮಗಳೂರು ಜಿಲ್ಲೆ, ಕರ್ನಾಟಕ.
೫. ಪತ್ರಿಕೆಯ ಮಾಲೀಕತ್ವ ಅಥವಾ ಪಾಲುದಾರಿಕೆ : ಪೂರ್ಣ ಮಾಲೀಕತ್ವ : ಸಿರಿಮನೆ ನಾಗರಾಜ್.

ಮೇಲೆ ಕಾಣಿಸಿರುವ ವಿವರಗಳು ನನ್ನ ಗ್ರಹಿಕೆ ಮತ್ತು ವಿಶ್ವಾಸದ ಪ್ರಕಾರ ಸರಿಯಾಗಿವೆಯೆಂದು ಈ ಮೂಲಕ ಹೇಳುತ್ತಿದ್ದೇನೆ.

೩೧-೩-೧೯೯೧. ಸಿರಿಮನೆ ನಾಗರಾಜ್ (ಪ್ರಕಾಶಕರು)

ಕಟ್ಟಿ ಬೆಳೆಸಲಾಗದಿದ್ದರೂ ಕುಟ್ಟಿ ಕೆಡವಲೇನು?!

(೨ನೇ ಪುಟದಿಂದ)

ಒದಗಿದರು. ಅವರಿಬ್ಬರ ನೇತೃತ್ವದಲ್ಲಿ ಹಾಗೂ ರಾಜಕೀಯ ಉಪಜೀವಿಗಳ ಹಿಮ್ಮೇಳದಲ್ಲಿ ಹಲವು ತಿಂಗಳ ಕಾಲ ಘಟಕದೊಳಗೊಂದು 'ಅಂತರ್ಯುದ್ಧ' ನಡೆದು, ಕೊನೆಗೆ ರೇವತಿ, ಇಂದ್ರಾಣಿ ಮತ್ತಿತರ ೭ ಜನ ಘಟಕ ಬಿಟ್ಟು ಹೊರ ನಡೆದು, ಘಟಕದ ಬಗ್ಗೆ, ಅದರ ಪೋಷಕಿಯ ಬಗ್ಗೆ ಅಶ್ಲೀಲ ಹುಟ್ಟಿದ ಪ್ರಚಾರ ಸಹ ನಡೆಸಿದರು. ಅದರಿಂದಾಗಿ, ಜಯಲಕ್ಷ್ಮಿಯವರಿಂದ ಮಾನ ನಷ್ಟ ಮೊಕದ್ದಮೆಗೂ ಈಡಾದರು.

ಇವರುಗಳು ಹೊರ ಬಿದ್ದ ಮೇಲೆ ಘಟಕ ಚೆನ್ನಾಗಿ ನಡೆಯತೊಡಗಿತು: ಆದರೆ ಅಷ್ಟರಲ್ಲಿ ಜಿ. ಪ. ಸದಸ್ಯೆಯಾಗಿದ್ದ ಸುಮಿತ್ರಮ್ಮ ತನ್ನ ಸ್ಥಾನದ ಎಲ್ಲ ವಿನಾಶಕಾರಿ ಬಲವನ್ನೂ ಈ ಘಟಕದ ವಿರುದ್ಧ ಬಳಸತೊಡಗಿದರು. ಅದನ್ನು ಮುಚ್ಚಲು, ಎತ್ತಂಗಡಿ ಮಾಡಲು – ಹೀಗೆ ಏನೇನೆಲ್ಲ ಕುತಂತ್ರ ನಡೆಸಿದರು. ಆದರೆ ಶಾಸಕರಾಗಿದ್ದ ಗೋವಿಂದ ಗೌಡರ ತಕ್ಕಮಟ್ಟಿನ ರಕ್ಷಣೆಯಿಂದ ಘಟಕ ಬದುಕಿ ಉಳಿಯಿತು.

ಆದರೂ ಅದಕ್ಕೆ ಸ್ವಂತ ಕಟ್ಟಡಕ್ಕಾಗಿ ಜಿಲ್ಲಾ ಪರಿಷತ್ತಿನಿಂದ ಮಂಜೂರಾಗಿದ್ದ ೧ ೫೫ ಲಕ್ಷ ರೂ.ಗಳನ್ನು ಈಕೆ ರದ್ದು ಮಾಡಿಸಿದರೂ, ಕೊನೆಗೆ ಗೋವಿಂದ ಗೌಡರ ಪ್ರಯತ್ನದಿಂದ ೫೫ ಸಾವಿರ ರೂ ಮಾತ್ರ ಮಂಜೂರಾಯಿತು: ದಿನಬೆಳಗಾದರೆ ಅಧಿಕಾರಿಗಳ ಕಿರಿಕಿರಿ, ಬಿಲ್‌ಗಳು ಸಕಾಲಕ್ಕೆ ಬರಲಾಗದಂಥ ಸುತ್ತು-ಬಳಸಿನ ಪಾವತಿ ವ್ಯವಸ್ಥೆ, ಏನೇನೂ ಅಗತ್ಯವಿಲ್ಲದಿದ್ದರೂ ಬಿಡಿಒ ಅವರಿಂದ ಹಣಕಾಸಿನ ಹತೋಟಿ– ಇವೆಲ್ಲ ಘಟಕಕ್ಕೆ ಸಾಕಷ್ಟು ಉಸಿರು ಕಟ್ಟಿಸಿಕೊಂಡೇ ಬಂದುವು.

ಆದರೆ, ಉಳಿದಿರುವ ೧೪ ಜನ ಫಲಾನುಭವಿ ಮಹಿಳೆಯರ ಛಲ ಬಿಡದ ಪರಿಶ್ರಮದಿಂದ ಘಟಕ ಬೆಳೆದಿದೆ. ಸದಸ್ಯೆಯರು ಕೇವಲ ೧೦ ರೂ.. ದಿನಗೂಲಿ ಪಡೆಯುತ್ತ, ಲಾಭಾಂಶವನ್ನೆಲ್ಲ ಪುನಃ ಅದರಲ್ಲೇ ತೊಡಗಿಸಿ ಕಷ್ಟದಿಂದ ಅದನ್ನು ಬೆಳೆಸಿದ್ದಾರೆ. ೧೯ ಸಾವಿರ ರೂ. ವೆಚ್ಚದಲ್ಲಿ ವಿದ್ಯುತ್ ಸಂಪರ್ಕ, ೨೭ ಸಾವಿರ ರೂ.ಗಳ ದೊಡ್ಡ ಹಲ್ಲರ್, ೩೪ ಸಾವಿರ ರೂ. ವೆಚ್ಚದಲ್ಲಿ ಮುಖ್ಯ ಕಟ್ಟಡಕ್ಕೆ ಕಡಿಮಾಡು ಸೇರಿಸಿ ಕಟ್ಟಡದ ವಿಸ್ತರಣೆ — ಇವೆಲ್ಲ ಇವರದೇ ಪರಿಶ್ರಮದ ಫಲ. ಅಲ್ಲದೆ, ತೀರಾ ಶ್ರಮದ ಕೆಲಸಗಳಿಗಾಗಿ ತಿಂಗಳಿಗೆ ೬೦೦ ರೂ ಸಂಬಳ ಕೊಟ್ಟು ಒಬ್ಬ ಗಂಡಾಳನ್ನೂ, ಸ್ವಚ್ಛತೆ ಮುಂತಾದುವುಗಳಿಗಾಗಿ ೧೦ ರೂ. ದಿನಗೂಲಿಗೆ ಒಬ್ಬ ಹೆಣ್ಣಾಳನ್ನೂ ನೇಮಿಸಿಕೊಂಡಿದ್ದಾರೆ.

ಕೇವಲ ಕೊಪ್ಪ, ಶೃಂಗೇರಿ, ಕಡೂರು ಮತ್ತು ಮೂಡಿಗೆರೆ ತಾಲ್ಲೂಕುಗಳ ಅಂಗನವಾಡಿಗಳಿಗೆ ಮಾತ್ರ ಇಲ್ಲಿಂದ ಶಿಶು ಆಹಾರ ಪೂರೈಕೆಯಾಗುತ್ತಿದೆ. ಇಲ್ಲದೆ ಸರ್ಕಾರ, ಜಿಲ್ಲಾ ಪರಿಷತ್ತು ಅಥವಾ ಸಮಾಜ ಕಲ್ಯಾಣ ಇಲಾಖೆಯಿಂದ ಹೇಳಿಕೊಳ್ಳುವಂಥ ನೆರವೇನೂ ಸಿಗುತ್ತಿಲ್ಲ. ಶಿಶು ಆಹಾರ ತಯಾರಿಕೆಗೆ ಬೇಕಾದ ಪದಾರ್ಥಗಳೆಲ್ಲದರ ಬೆಲೆ ಏರುತ್ತಿದ್ದರೂ (ಕಡ್ಲೆಬೇಳೆ ೫ ರೂ ಗಳಿಂದ ೧೩ ರೂ ಗೆ ಏರಿಕೆ, ಶೇಂಗಾ ೬ರಿಂದ ೧೪ ರೂ., ಬೆಲ್ಲ ೩ ರೂ.ಗಳಿಂದ ೮ ರೂ , ಗೋಧಿ ೧ ೩೦ರಿಂದ ೨.೬೦, ಸಾಗಾಣಿಕೆ ದರ ಕೂಡ ಅಷ್ಟೆ.) ೧೯೮೫ರಲ್ಲಿ ನಿಗದಿ ಮಾಡಿದ್ದ ಕ್ವಿಂಟಾಲಿಗೆ ೬೭೦ ರೂ. ದರವೇ ಇಂದಿಗೂ ಮುಂದುವರಿದಿದೆ. ಕಟ್ಟಡದ ವಿಸ್ತರಣೆಗೆಂದು ೧೦ ಸಾವಿರ ರೂ. ಮಂಜೂರಾಗಲಿದ್ದುದನ್ನೂ ರಾಜಕಾರಣಿಗಳು ತಪ್ಪಿಸಿದರಂತೆ!

ಇದರಲ್ಲಿ ಕಡ್ಲೆಬೇಳೆ, ಶೇಂಗಾ, ಗೋಧಿ ಇಷ್ಟನ್ನಾದರೂ ರೇಶನ್ ದರದಲ್ಲಿ ಕೊಡಿಸಿ ಹಾಗೂ ಸಾಗಾಣಿಕೆ ವೆಚ್ಚ ಕೊಡಿಸಿ ಎಂದರೆ ಅಧಿಕಾರಿಗಳು ಕಿವಿಯ ಮೇಲೆ ಹಾಕಿಕೊಂಡಿಲ್ಲ. ಕೇವಲ ತಿಂಗಳಿಗೆ ೧೦೦ ಕ್ವಿಂಟಾಲ್ ಗೋಧಿಯನ್ನು ಮಾತ್ರ ಜಿಲ್ಲಾಧಿಕಾರಿಗಳು ಕೊಡಿಸುತ್ತಿದ್ದಾರೆ. ತಿಂಗಳಿಗೆ ೧೫೦ರಿಂದ ೧೭೦ ಕ್ವಿಂಟಾಲ್ ಗೋಧಿ ಬೇಕು.

ಇಷ್ಟೆಲ್ಲದರ ನಡುವೆಯೂ, ಈ ಘಟಕ ತನ್ನ ಕಾಲ ಮೇಲೆ ತಾನು ನಡೆಯುತ್ತಿದೆ. ಸದಸ್ಯೆಯರು ಅಂದಿನಿಂದ ಇಂದಿನವರೆಗೂ, ವರ್ಷದ ಲಾಭಾಂಶ ಕೂಡ ಕೈಗೆ ತೆಗೆದುಕೊಳ್ಳದೆ, ಕೇವಲ ೧೦ ರೂ. ದಿನಗೂಲಿ ತೆಗೆದುಕೊಂಡು ಘಟಕವನ್ನು ಬೆಳೆಸಿದ್ದಾರೆ. ಬೇರೆ ಬೇರೆ ಜಿಲ್ಲೆಗಳ ಸಮಾಜ ಕಲ್ಯಾಣ ಇಲಾಖಾಧಿಕಾರಿಗಳು ಇಲ್ಲಿಗೆ ಭೇಟಿ ಕೊಟ್ಟು ತಮ್ಮ ಅಪಾರ ಮೆಚ್ಚುಗೆಯನ್ನು ಸಂದರ್ಶಕರ ಪುಸ್ತಕದಲ್ಲಿ ದಾಖಲಿಸಿದ್ದಾರೆ. ಅಷ್ಟೇ ಅಲ್ಲ, ಅಫಘಾನಿಸ್ತಾನದಿಂದ ಬಂದಿದ್ದ ಒಂದು ಅಧಿಕಾರಿಗಳ, ತಜ್ಞರ ತಂಡ ಕೂಡ ತನ್ನ ಅಪಾರ ಮೆಚ್ಚುಗೆಯನ್ನು ದಾಖಲಿಸಿದೆ.

ಆದರೂ ಇಲ್ಲಿನ ಕ್ಷುದ್ರ ರಾಜಕೀಯ ಜೀವಿಗಳ ಕಣ್ಣಿಗೆ ಇಲ್ಲಿನ ಆಹಾರದ ಗುಣಮಟ್ಟ ಕಳಪೆಯಾಗಿಯೂ, ಇಲ್ಲಿ ಅಪಾರ ಹಣ ದುರುಪಯೋಗವಾಗಿರುವುದಾಗಿಯೂ ಕಂಡು ಬರುತ್ತದೆ!

ಈ ಬರಹದೊಂದಿಗೆ ಪ್ರಕಟಿಸಿರುವ ಜಿ.ಪ. ವರದಿಯಲ್ಲಿ ಯಾರ್ಯಾರ ಬಣ್ಣ ಏನೇನೆಂದು ಜಾಹೀರಾಗಿದೆ. ಅವರುಗಳ ಮುಖ್ಯ ಆಕ್ಷೇಪಣೆಗಳು ಇವು—ಇಲ್ಲಿ ಈಗ ಸಿಎಫ್‌ಟಿಆರ್‌ಐಯಲ್ಲಿ ತರಬೇತಾದವರು ಯಾರೂ ಇಲ್ಲ; ಆಹಾರದ ಗುಣಮಟ್ಟ ಕಳಪೆಯಾಗಿದೆ; ಹಣ ದುರುಪಯೋಗವಾಗಿದೆ—ಎಂಬುದು.

ಸಿಎಫ್‌ಟಿಆರ್‌ಐ ತರಬೇತಿ ಎಂದರೆ, ಶಿಶು ಆಹಾರ ತಯಾರಿಕೆ ಬಗ್ಗೆ ಸುಮಾರು ೨ ಗಂಟೆಗಳ ಕಾಲದ ಒಂದು ಪಾಠ ಮತ್ತು ಚಿತ್ರದುರ್ಗದ ಆಹಾರ ತಯಾರಿಕಾ ಘಟಕಕ್ಕೆ ಭೇಟಿ ಕೊಟ್ಟು ಒಮ್ಮೆ ಕಣ್ಣಿಂದ ನೋಡುವುದು—ಇಷ್ಟೇ. ಮತ್ತಿಲ್ಲ ಇವರು ಸ್ವತಃ ಮಾಡಿ ಅನುಭವ ಪಡೆಯುವುದೇ ಹೊರತು ಅದೇ ಸೂತ್ರ-ತಿಂಗಳುಗಟ್ಟಲೆಯ, ಸ್ವಂತ ಮಾಡಿಸಿ ಕಲಿಸುವ ತರಬೇತಿಯಲ್ಲ. ಇಷ್ಟು "ತರಬೇತಿ" ಪಡೆದು ಬಂದಿದ್ದ ನಾಲ್ವರು, ಶಿಶು ಆಹಾರದಲ್ಲಿ ಗೋಧಿ, ಕಡಲೆ, ಶೇಂಗಾ ಮತ್ತು ಬೆಲ್ಲದ ಪ್ರಮಾಣ ಎಷ್ಟಿರಬೇಕು ಹಾಗೂ ಅವನ್ನು ಯಾವ ರೀತಿ ಸ್ವಚ್ಛಗೊಳಿಸಿ, ಹುರಿದು, ಪುಡಿಮಾಡಿ ಬೆರೆಸಬೇಕು ಎಂಬ ಬಗ್ಗೆ ಸಿಎಫ್‌ಟಿಆರ್‌ಐಯವರು ಹಾಕಿಕೊಟ್ಟಿದ್ದ ಸೂತ್ರದ ಪ್ರಕಾರ ಉಳಿದ ಸದಸ್ಯೆಯರೊಂದಿಗೆ ತಿಂಗಳುಗಟ್ಟಲೆ ಕೆಲಸ ಮಾಡಿದ್ದಾರೆ. ಈಗಲೂ ಅದೇ ಸೂತ್ರದ ಪ್ರಕಾರವೇ ಕೆಲಸ ಮಾಡುತ್ತಿದ್ದಾರೆ. ಇನ್ನೆಂಥ ತರಬೇತಿ ಬೇಕು?

ಒಂದು ವೇಳೆ ಪ್ರತಿಯೊಬ್ಬರಿಗೂ ಮೇಲೆ ಹೇಳಿದಂಥ ಅದ್ಭುತವಾದ ತರಬೇತಿಯೇ ಇರಬೇಕೆನ್ನುವುದಾದರೆ, ಜಿಲ್ಲಾ ಪರಿಷತ್ತಿನ ಅಧೀನದ ಈ ಘಟಕದ ಅನಕ್ಷರಸ್ಥ, ನಿರ್ಗತಿಕ ಮಹಿಳೆಯರನ್ನು ಅಲ್ಲಿಗೆ ಕಳಿಸುವ ವ್ಯವಸ್ಥೆ ಮಾಡಲು ಜಿಲ್ಲಾ ಪರಿಷತ್ತಿಗೆ ಸಾಧ್ಯವಿರಲಿಲ್ಲವೆ? ಬೇಕಾದರೆ ಘಟಕದ ಖರ್ಚಿನಲ್ಲೇ ಮಾಡಿಸಬಹುದಿತ್ತು. ಅದರ ಬದಲು ಇದನ್ನೇ ಇಲ್ಲಿನ ಆಹಾರ ಖರೀದಿಸದಿರಲು ದೊಡ್ಡ ಕಾರಣವಾಗಿ ಮಾಡಿಕೊಂಡಿದ್ದನ್ನು "ಕೋಳಿ-ಕುರಿಮರಿ ನ್ಯಾಯ" ಎನ್ನದೆ ಬೇರೇನು ಹೇಳಲು ಸಾಧ್ಯ?

ಆಹಾರದ ಕಳಪೆ ಗುಣಮಟ್ಟ: ಇದನ್ನು ನಿರ್ಧರಿಸಿದ್ದು ಯಾರು? ಪ್ರತಿ ವರ್ಷ ಡಿಸೆಂಬರ್‌ನಲ್ಲಿ ಆಹಾರದ ಮಾದರಿಯನ್ನು ಸಿಎಫ್‌ಟಿಆರ್‌ಐಗೆ ಕಳಿಸುತ್ತಿದ್ದಾರೆ. ಅಲ್ಲಿ ಅದನ್ನು ವಿಶ್ಲೇಷಿಸಿ, ಪೌಷ್ಟಿಕ ಅಂಶ ಎಷ್ಟೆಷ್ಟಿದೆ ಎಂದು ಒಂದು ಪ್ರಯೋಗ ಶಾಲಾ ವರದಿ ಬರುತ್ತದೆ. ಅದನ್ನು ಇಲ್ಲಿ ದಾಖಲಿಸಲಾಗಿದೆ. ಒಂದು ವೇಳೆ ಕಳಪೆಯಾಗಿದ್ದರೆ ಸಿಎಫ್‌ಟಿಆರ್‌ಐ ಪ್ರಯೋಗಾಲಯದವರು ಸುಮ್ಮನಿರುತ್ತಿದ್ದರೆ? ಜಿಲ್ಲಾ ಪರಿಷತ್ತಿನವರು ಅಂಥ ವಿಶ್ಲೇಷಣಾ ವರದಿ ಕೇಳಿದಾಗಲಾದರೂ ಇವರು ಅದನ್ನು "ಕಳಪೆ" ಎಂದು ಘೋಷಿಸುತ್ತಿರಲಿಲ್ಲವೆ?

ಇದೇ ಆಹಾರವನ್ನು ಐದು ವರ್ಷದಿಂದ ಇಡೀ ಜಿಲ್ಲೆಯ ಸಾವಿರಾರು ಮಕ್ಕಳು ತಿಂದಿದ್ದಾರಲ್ಲ. ಒಮ್ಮೆಯಾದರೂ ಒಂದು ಮಗುವಿಗಾದರೂ ಆರೋಗ್ಯ ಕೆಟ್ಟ ಪ್ರಸಂಗ ನಡೆದಿದೆಯೆ? ಒಮ್ಮೆಯಾದರೂ ಒಂದು ಮಗುವಾದರೂ ಇದನ್ನು ತಿನ್ನಲಾರದೆ ತಿರಸ್ಕರಿಸಿದ್ದಿದೆಯೆ? ಇವತ್ತಿಗೂ ಮಕ್ಕಳು ಇದನ್ನು ಖುಷಿಯಾಗಿ ತಿನ್ನುತ್ತಿದ್ದಾರಲ್ಲ? ಕೇವಲ ಅಂಗನವಾಡಿಗಳಲ್ಲಿ ಮಾತ್ರವಲ್ಲ. ಇತರ ಪ್ರಾಥಮಿಕ ಶಾಲೆಗಳಲ್ಲಿ ಕೂಡ (ಕೊಪ್ಪದಲ್ಲಿ) ಇದನ್ನು ಹಂಚಲಾಗುತ್ತಿದೆ. ಅಲ್ಲಿ [illegible]ರುಗಳ, ಪ್ರಯೋಗಾಲಯದ [illegible]ಗಳ ಮಕ್ಕಳೆಲ್ಲ ಇದನ್ನು ತಿನ್ನುತ್ತಾರೆ. ಯಾರೂ ಆಕ್ಷೇಪಿಸಿಲ್ಲವಲ್ಲ?

ಈ 'ಕಳಪೆ' ಆರೋಪದ ಹಿನ್ನೆಲೆಯಲ್ಲಿ ಘಟಕದ ಸದಸ್ಯೆಯರು ಹೀಗೆ ವಿವರಿಸುತ್ತಾರೆ: ಶೃಂಗೇರಿಯ ಬಾಲ ವಿಕಾಸ ಯೋಜನಾಧಿಕಾರಿಗಳ ಕಛೇರಿಯಲ್ಲಿ ಈ ಆಹಾರವನ್ನು ಸರಿಯಾದ ಕಡೆ ಸರಿಯಾದ ರೀತಿಯಲ್ಲಿ ಇಡುತ್ತಿರಲಿಲ್ಲವಂತೆ. ಅಲ್ಲಿಗೆ ಒಮ್ಮೆ ಬಂದು [illegible] ಉಳಿದ ಆಹಾರದ ಚೀಲಗಳನ್ನು ಅಲ್ಲಿ ಹಾಗೆ ಮೂರ್ನಾಲ್ಕು ತಿಂಗಳು ಕೊಳೆಯಬಿಟ್ಟು, ಥಂಡಿಯಿಂದ ಅದು ಸ್ವಲ್ಪ ಮುಗ್ಗಿ, ಇಲಿಗಳು ಹೊಕ್ಕು, ಚೀಲಗಳ ಮೇಲೆಲ್ಲ ಗಲೀಜು ಮಾಡಿದ್ದುವಂತೆ. (ಆಹಾರವನ್ನು ಪ್ಲಾಸ್ಟಿಕ್ ಪೊಟ್ಟಣಗಳಲ್ಲಿ ಪ್ಯಾಕ್ ಮಾಡಿ, ಪ್ಲಾಸ್ಟಿಕ್ ಚೀಲಗಳಲ್ಲಿ ತುಂಬಿಸಿರುತ್ತಾರೆ. ಸಾಮಾನ್ಯವಾಗಿ ೩-೪ ತಿಂಗಳು ಇಟ್ಟರೂ ಅದು ಕೆಡುವುದಿಲ್ಲ.)

ಹೀಗೆ ಅಕಸ್ಮಾತ್ ಕೆಟ್ಟು ಹೋದ ಪೊಟ್ಟಣಗಳನ್ನೇ ನಮ್ಮ ಜವಾಬ್ದಾರರು "ಮಾದರಿ" ಯಾಗಿ ಪ್ರದರ್ಶಿಸುತ್ತಿದ್ದಾರಂತೆ! ಸಿಎಫ್‌ಟಿಆರ್‌ಐ ತಜ್ಞರಲ್ಲ ಗುಣಮಟ್ಟದ ಬಗ್ಗೆ ತೀರ್ಮಾನ ಕೊಡುವುದು—ನಮ್ಮ ಗುಣಾತೀತರಾದ ರಾಜಕಾರಣಿಗಳು!

ಇಷ್ಟಾದರೂ, ಗುಣಮಟ್ಟ [illegible] ([illegible]) [illegible]? [illegible] ([illegible])

ಇನ್ನು, ಹಣ ದುರುಪಯೋಗವಾಗಿದ್ದರೆ

(೪ನೇ ಪುಟಕ್ಕೆ)

> **ಘಟಕದ ನಾಯಕಿಯಾಗಿದ್ದಾಗಲೇ ರಾಜಕೀಯ ಉಪದ್ರವಿಗಳ ಆಮಿಷಕ್ಕೆ ಮನಸೋತು, ಘಟಕದ ಬೆನ್ನಿಗೆ ಚೂರಿ ಹಾಕಿ ತೊರೆದು (ತೊಲಗಿ!) ಹೋದ ರೇವತಿ ಮತ್ತು ಅವಳ ಜೊತೆಗಾತಿಯರನ್ನು ಬೇಕರಾಗಿ ಪುನಃ ಘಟಕಕ್ಕೆ ಸೇರಿಸಿಕೊಳ್ಳಬೇಕೆಂಬುದು ಈಗ ಈ ಜಿಲ್ಲಾ ಟಗರುಗಳ ಹಠವಂತೆ.**

ಜಿಲ್ಲಾ ಪರಿಷತ್ ಸಭೆಯ ನಡವಳಿಕೆಯ ವರದಿ

(೨ನೇ ಪುಟದಿಂದ)

ಕೆ. ಎಂ. ಕೃಷ್ಣಮೂರ್ತಿಯವರು, ಜಿಲ್ಲೆಯಲ್ಲಿರುವ ದ್ವಾರಕಾ ಘಟಕದಲ್ಲಿ ಉತ್ತಮ ಗುಣಮಟ್ಟದ ಪೌಷ್ಟಿಕ ಆಹಾರ ತಯಾರಿಸುವಂತೆ ನಿಗಾ ವಹಿಸಬೇಕೆಂದೂ, ಈಗಿರುವ ಫಲಾನುಭವಿಗಳಿಗೆ ತರಬೇತಿ ನೀಡುವ ವ್ಯವಸ್ಥೆಯಾಗಬೇಕು; ಅಲ್ಲಿಯವರೆಗೆ ಚಿತ್ರದುರ್ಗದ ಪೌಷ್ಟಿಕ ಆಹಾರವೇ ಪೂರೈಕೆಯಾಗಲಿ ಎಂದರು. ಇದನ್ನು [illegible] ಚಂದ್ರಶೇಖರ್‌ರವರೂ ಅನುಮೋದಿಸಿದರು.

ಅಂತಿಮವಾಗಿ ಸಭೆಯು ಅರಗೋಡು ದ್ವಾರಕಾ ಘಟಕದ ಫಲಾನುಭವಿಗಳು ಸಿ. ಎಫ್. ಟಿ. ಆರ್. ಐನಲ್ಲಿ ತರಬೇತಿ ಪಡೆದು, ಆ ಸಂಸ್ಥೆ [illegible] ಗುಣಮಟ್ಟದ ಪೌಷ್ಟಿಕ ಆಹಾರವನ್ನು ತಯಾರಿಸಲು [illegible] ಆಹಾರವನ್ನು ಈ ಘಟಕದಿಂದ ಕೊಳ್ಳಲು [illegible] ಚಿತ್ರದುರ್ಗದ ಪೌಷ್ಟಿಕ ಆಹಾರವನ್ನು ಖರೀದಿಸುವುದೆಂದು ತೀರ್ಮಾನಿಸಿತು.

(ಜಿಲ್ಲಾ ಪರಿಷತ್ ಸಭಾ [illegible])

ಶೃಂಗೇರಿ ನೇಚರ್ ಅಡ್ವೆಂಚರ್ ಕ್ಲಬ್ ಉದ್ಘಾಟನೆ

ಬೆಟ್ಟಗುಡ್ಡ, ಬಂಡೆಗಳನ್ನು ಹತ್ತುವ ಕಾಡು ಸುತ್ತುವ ಮತ್ತಿತರ ಸಾಹಸ ಕಾರ್ಯಗಳಲ್ಲಿ ಆಸಕ್ತಿ ಇರುವವರನ್ನು ಒಂದೆಡೆ ಸೇರಿಸಲು ಆರಂಭವಾಗಿರುವ 'ಶೃಂಗೇರಿ ನೇಚರ್ ಅಡ್ವೆಂಚರ್ ಕ್ಲಬ್' (ಸ್ನ್ಯಾಕ್) ಅನ್ನು ನಿವೃತ್ತ ಯು.ಎಸ್.ಓ. ಅಧಿಕಾರಿ ರಾಮಚಂದ್ರ ಅವರು ಈಚೆಗೆ ಉದ್ಘಾಟಿಸಿದರು.

ಶೃಂಗೇರಿ ಜೇಸಿ ಅಧ್ಯಕ್ಷ ಎನ್. ಸಿ. ಪಾಂಡುರಂಗರವರ ಅಧ್ಯಕ್ಷತೆಯಲ್ಲಿ ನಡೆದ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಜಿಲ್ಲಾ ಪರಿಷತ್ ಸದಸ್ಯ ಕೆ. ವಿ ರಾಮಪ್ಪಯ್ಯ, ತಹಸೀಲ್ದಾರ್ ಟಿ ಆರ್. ಬೋರೇಗೌಡ ಮತ್ತು ಹಲವು ಸಾಹಸ ಕಾರ್ಯಗಳಲ್ಲಿ ಭಾಗವಹಿಸುತ್ತಿರುವ ಬೆಂಗಳೂರಿನ ದೇನಾಶ್ರೀ ಇವರುಗಳು ಉಪಸ್ಥಿತರಿದ್ದರು.

ಈ ಕಾರ್ಯಕ್ರಮಕ್ಕೆ ಮುನ್ನ ಪರ್ವತಾ ರೋಹಣ ಮತ್ತು ಶಿಲಾರೋಹಣಗಳಲ್ಲಿ ಬಳಸುವ ಪರಿಕರಗಳ ಪ್ರದರ್ಶನವಿತ್ತು. ನಂತರ ಮಾನಸ ಸರೋವರ ಮತ್ತು ಕೈಲಾಸ ಪರ್ವತಗಳಿಗೆ ಸಂಬಂಧಿಸಿದ ಸ್ಲೈಡ್ಸ್ ಪ್ರದರ್ಶನ ನಡೆಯಿತು.

ಜೆ. ಎಸ್. ಶ್ಯಾನಭಾಗ್ ಸ್ವಾಗತಿಸಿ ಸತೀಶ್ ಶೆಟ್ಟಿ ವಂದಿಸಿದರು

ಈ ರೀತಿಯ ಸಂಸ್ಥೆಗಳು, ಪರಿಸರದ ಬಗ್ಗೆ ಕನಿಷ್ಠ ತಿಳುವಳಿಕೆ, ಕಾಳಜಿಯಿಲ್ಲದ ಸಭೆ ಸಮಾರಂಭಗಳ ಮಾಮೂಲು ಕುರ್ಚಿಗಳಿಂದ ಮತ್ತು 'ಜೇಸಿ ಸಂಸ್ಕೃತಿ'ಯ ಬೆರಕೆಯಿಂದ ದೂರವಿರದಿದ್ದಲ್ಲಿ, ಜನಸಾಮಾನ್ಯನಾಗಲಿ, ಪ್ರತಿಷ್ಠೆಯ ತೆವಲಿಲ್ಲದ ನಿಜವಾದ ಪರಿಸರಾಸಕ್ತರಾಗಲಿ ಮತ್ತು ಸಾಹಸ ಪ್ರೇಮಿಗಳಾಗಲಿ ಹತ್ತಿರವೂ ಸುಳಿಯಲಿಕ್ಕಿಲ್ಲ. (ವರದಿ: ವೈ ಗ ಜಗದೀಶ್)

ಕಟ್ಟಿ ಬೆಳೆಸಲಾಗದಿದ್ದರೂ ಕುಟ್ಟಿ ಕೆಡಹಲೇನು?!

(೩ನೇ ಪುಟದಿಂದ)

ತನಿಖೆ ಮಾಡಿಸಿ, ತಪ್ಪಿತಸ್ಥರನ್ನು ಪತ್ತೆ ಹಚ್ಚಿ ಶಿಕ್ಷಿಸಲು ಯಾರ ಅಡ್ಡಿಯೂ ಇರುವುದಿಲ್ಲ. **ಇಲ್ಲಿನ ಲೆಕ್ಕದ ಪುಸ್ತಕ, ರಶೀದಿ ಪುಸ್ತಕಗಳನ್ನೆಲ್ಲ ಈ ಹಿಂದೆ ಬಿಡಿಒ ಕಛೇರಿಗೊಯ್ದು, ತಿದ್ದಿ, ಲೆಕ್ಕ ವ್ಯತ್ಯಾಸ ಬರಿಸಿದ್ದು ಯಾರು? ಎಂಬುದೂ ತನಿಖೆಯಾಗುತ್ತೆ.**

ಇವೆಲ್ಲ ಈ ಘಟಕವನ್ನು ತಮ್ಮ ಅಂಕೆಯೊಳಗಿಟ್ಟುಕೊಳ್ಳಲು ನಾಟಕ ಅಷ್ಟೇ. ಶಾಸಕ ಶಾಮಣ್ಣ ಹೇಳಿರುವಂತೆ, "ಮಕ್ಕಳ ಆರೋಗ್ಯದ ಹಿತ ದೃಷ್ಟಿ" ಯೇ ಇಷ್ಟಕ್ಕೆಲ್ಲ ಕಾರಣವಾಗಿದ್ದರೆ, ೬ ವರ್ಷಗಳಿಂದ ಚೆನ್ನಾಗಿ ನಡೆಯುತ್ತಿರುವ ಈ ಘಟಕವನ್ನು- ಒಂದು ವೇಳೆ ಅಲ್ಲಿ ತಪ್ಪಿದ್ದರೆ–ಸರಿಪಡಿಸುವುದು ಕಷ್ಟದ ಮಾತೇನೂ ಆಗಿರಲಿಲ್ಲ.

ಈಗ ಸ್ವಲ್ಪ ಹಿನ್ನೆಲೆ ಪರಿಶೀಲಿಸೋಣ. ಕಳೆದ ಸುಮಾರು ೨-೩ ವರ್ಷಗಳಿಂದಲೂ ಇಲ್ಲಿನ ಸದಸ್ಯೆಯರ ಮೇಲೆ ಒತ್ತಡ ಹೇರಿದ. ರಾಜಕಾರಣಿಗಳು ಇವರಿಗೆ ನೀಡಿದ ತಾಕೀತು—"ಜಯಲಕ್ಷ್ಮಿ ಹಾಕಿರುವ ಮಾನನಷ್ಟ ದಾವೆಯಲ್ಲಿ ಸಾಕ್ಷಿ ಹೇಳಬಾರದು". ಇವರು ಅದಕ್ಕೆ ಒಪ್ಪಿದ್ದೂ ಆಯಿತು. "ಜಯಲಕ್ಷ್ಮಿಯ ಮನೆಗೆ ಹೋಗಬಾರದು. ಏನಿದ್ದರೂ ನಮ್ಮ ಮನೆಗೇ ಬರಬೇಕು!" ಅದೂ ಆಯಿತು. ಇವರುಗಳ ಮನೆಗೆ ಅಲೆದು ಕಂಗೆಟ್ಟ ಸದಸ್ಯೆಯರು (ಕಟ್ಟುವುದೆಂದರೆ ಸಿಕ್ಕಷ್ಟು ಕಬಳಿಸುವುದು; ಅದು ಬಿಟ್ಟರೆ ಮುರಿಯುವುದು–ಇಷ್ಟು ಮಾತ್ರ ಬಲ್ಲವರು ಏನು ನೆರವು, ಮಾರ್ಗದರ್ಶನ ಕೊಟ್ಟಾರು!?) ಆ ಕಡೆ ಹೋಗುವುದು ಕಡಿಮೆ ಮಾಡಿದರಂತೆ. ಆದರೂ ಪದೇ ಪದೇ ಹೋಗಿ ಮನವಿ ಕೊಡುವುದು, "ಬನ್ನಿ. ಪರಿಶೀಲಿಸಿ" ಎಂದು ಗೋಗರೆಯುವುದು– ಇದ್ಯಾವುದಕ್ಕೂ ಕಿಡಿಮೆ ಮಾಡಲಿಲ್ಲವೆಂದು, ಕಳೆದ ತಿಂಗಳು ಘಟಕಕ್ಕೆ ಭೇಟಿ ಕೊಟ್ಟಿದ್ದ ಜಿಲ್ಲೆಯ ಪತ್ರಕರ್ತರ ತಂಡಕ್ಕೆ ಸದಸ್ಯೆಯರು ತಿಳಿಸಿದರು.

ಜಿ. ಪ. ಸದಸ್ಯೆಯ ಜೋರು ಹೀಗೆ– "ಇದೆಲ್ಲ ನನ್ನ ಕೈಲಿದೆ. ಬೇಕಾದರೆ ಮುಚ್ಚಿಸಬಲ್ಲೆ ಇಷ್ಟವಾದರೆ ಮಾತ್ರ ಉಳಿಸಬಲ್ಲೆ... "

ಸುಮಾರು ೩ ವಾರದ ಹಿಂದೆ ಕೊಪ್ಪದಲ್ಲಿ ಶಾಸಕರ ನೇತೃತ್ವದಲ್ಲಿ ಒಂದು "ಸಂಧಾನ ಸಭೆ"ಗೆ ಸದಸ್ಯೆಯರನ್ನು ಕರೆದರು. ಅಲ್ಲಿ ಈ ಮುಖಂಡ–ಮುಖಂಡೆಯರ ತೀರ್ಪು ಏನೆಂದರೆ. ಘಟಕ ತೊರೆದಿರುವ ೭ ಜನರನ್ನೂ ಪುನಃ ಸೇರಿಸಿಕೊಳ್ಳುವುದಾದರೆ ಘಟಕ ಮುಚ್ಚಿಸುವುದಿಲ್ಲ– ಎಂದು. "ನಾವು ಇಷ್ಟು ವರ್ಷ ದುಡಿದು ನಮ್ಮ ಪಾಲನ್ನೆಲ್ಲ ಅದರಲ್ಲಿ ತೊಡಗಿಸಿದ್ದೇವೆ. ಅವರೂ ತಮ್ಮ ಪಾಲು ಹಾಕಿಕೊಂಡು ಬೇಕಾದರೆ ಬರಲಿ" ಎಂದು ಸದಸ್ಯೆಯರು ಹೇಳಿದರೆ, ಒಪ್ಪಲಿಲ್ಲವಂತೆ.

ಅಂದರೆ ಇಷ್ಟೆಲ್ಲ ಪಿತೂರಿಗಳ ಉದ್ದೇಶ ಹೀಗಿರಬಹುದು–ತಮ್ಮ ರಾಜಕೀಯ ದುರಾಶೆಗಾಗಿ ಘಟಕದ ಸದಸ್ಯೆಯರನ್ನು ಒಡೆದು ಕೆಲವರನ್ನು ಕೆಲಸ ಬಿಡಿಸಿದ್ದಾಯಿತು. ಆದರೆ, ತಮ್ಮ ಸ್ವಂತಕ್ಕಲ್ಲದೆ ಬೇರೇನನ್ನೂ ತಳಪಾಯದಿಂದ ಕಟ್ಟಿ ಬೆಳೆಸುವ ಯೋಗ್ಯತೆಯಿಲ್ಲದ್ದರಿಂದ, ಅವರಿಗೆಲ್ಲ ಬೇರೆ ದಾರಿ ತೋರಿಸಲಾಗದೆ, ಈಗ ಗೆದ್ದಲು ಕಷ್ಟಪಟ್ಟು ಕಟ್ಟಿದ ಹುತ್ತದಲ್ಲಿ ಸೇರಿ ಜಬರ್ದಸ್ತು ಹಾರಿಸುವ ಹಾವಿನಂತೆ, ಅವರನ್ನೆಲ್ಲ ಇದರೊಳಗೇ ಸೇರಿಸಿಬಿಟ್ಟರೆ. ಮುಂದೆ ಈ ಘಟಕ ಫಲಾನುಭವಿಗಳಿಗೆ ಯೋಗ್ಯ ಜೀವನ ಮಾರ್ಗ ಕಲ್ಪಿಸಲಿ–ಬಿಡಲಿ, ತಮ್ಮ ರಾಜಕೀಯ ಉಪಜೀವನಕ್ಕಷ್ಟು ದಾರಿಯಾಗುತ್ತಲ್ಲ!

ಅದರ ಜೊತೆಗೆ, "ಸಿಎಫ್‌ಟಿಆರ್‌ಐ ತರಬೇತಾದವರು" ಎಂಬ "ಟೆಕ್ನಿಕಲ್" ನೆಪವೂ ಈಡೇರುತ್ತದೆ! (ರೇವತಿ ಮತ್ತಿತರರು 'ತರಬೇತಾದವರು.?) ಬಹುಶಃ ಈ ಸದಸ್ಯೆಯರೆಲ್ಲ ತಾವೇ ಕಷ್ಟಪಟ್ಟು ಸಿಎಫ್‌ಟಿಆರ್‌ಐ 'ತರಬೇತಿ' ಮುಗಿಸಿ ಬಂದರೂ ಸಹ, ಈ ೭ ಹಾವುಗಳನ್ನು ಸೇರಿಸಿಕೊಳ್ಳಲೊಪ್ಪದಿದ್ದರೆ ಮತ್ತೂ ಏನಾದರೂ 'ಕ್ಯಾತೆ' ತೆಗೆಯಲು ದಾರಿ ಇದ್ದೇ ಇರುತ್ತದೆ. ಏಕೆಂದರೆ, ಕಾನೂನುಬದ್ಧವಾಗಿ ಯಾರಿಗಾದರೂ ಉಪಕಾರ ಮಾಡುವುದು ಸುಲಭವಲ್ಲದಿದ್ದರೂ, **ಕಾನೂನುಬದ್ಧವಾಗಿಯೇ** ನಿರಂತರವಾಗಿ ಉಪಟಳ ಕೊಡುವುದು ಸುಲಭ ತಾನೆ?

ಓದುಗರಿಗೆ ಈ ಲೇಖನ ತೀರಾ ಆಕ್ರೋಶದಿಂದ ಕೂಡಿದೆಯೆನ್ನಿಸಬಹುದು. ನಿಜ– ಈ ರಾಜಕೀಯ ಮಲ್ಲರಿಗೆ ಕುಸ್ತಿ ಮಾಡಲೇಬೇಕಿದ್ದರೆವಾಸಪ್ಪಗೌಡರ ಅಥವ ಜಯಲಕ್ಷ್ಮಿಯವರ ಜೊತೆಗೋ ಬೇಕಾದಷ್ಟು ಸೆಣಸಾಡಲಿ ಆದರೆ,ತಮ್ಮದೇ ಫ್ಯಾಕ್ಟರಿಯಲ್ಲಿ ಕೇವಲ ೧೦ ರೂ. ದಿನಗೂಲಿಗೆ ೬ ವರ್ಷಗಳಿಂದ ದುಡಿಯುತ್ತ ಅದನ್ನು ಕಟ್ಟಿ ಬೆಳೆಸಿರುವ ಈ ಅನಕ್ಷರಸ್ಥ, ಒಡ ಮಹಿಳೆಯರ ಬದುಕನ್ನು ಹೊಸಕಿ ಹಾಕಿ, ಅವರುಗಳು ಪುನಃ ತಮ್ಮಗಳ (ಜಮೀನ್ದಾರಂ) ಮನೆಗೆ ಕೂಲಿ–ಜೀತಕ್ಕೇ ಬರುವಂಥ ಹೇಯ ಕೃತ್ಯ ಎಸಗುತ್ತಿದ್ದಾರಲ್ಲ—ಈ ನೀಚತನ ಕಂಡಾಗ ಆಕ್ರೋಶವಲ್ಲದೆ ಇನ್ನೇನು ಹೆಮ್ಮೆ ಪಡಬೇಕ?

—ಸಿರಿಮನೆ ನಾಗರಾಜ್

ಹವ್ಯಾಸಿ ಪತ್ರಕರ್ತನ ಸಾಧನೆಯ ವ್ಯಾಪ್ತಿ ಹೆಚ್ಚು — ಮಾನಳ್ಳಿ

ಹವ್ಯಾಸಿ ಪತ್ರಿಕೋದ್ಯಮವನ್ನು ಗಂಭೀರವಾಗಿ ಪರಿಗಣಿಸಿ ಅದರಲ್ಲಿ ತೊಡಗಿಸಿಕೊಳ್ಳುವ ಪತ್ರಕರ್ತ ವೃತ್ತಿ ನಿರತ ಪತ್ರಕರ್ತನಿಗಿಂತ ಹೆಚ್ಚಿನದನ್ನೇ ಸಾಧಿಸಬಲ್ಲ ಎಂದು ಹೆಸರಾಂತ ಹವ್ಯಾಸಿ ಪತ್ರಕರ್ತ ನಿರಂಜನ ಮಾನಳ್ಳಿ ಅಭಿಪ್ರಾಯಪಟ್ಟರು.

ಅವರು ಮಾರ್ಚ್ ೧೬ರಂದು ಜಿಲ್ಲಾ ವರದಿಗಾರರ ಒಕ್ಕೂಟ ಚಿಕ್ಕಮಗಳೂರಿನಲ್ಲಿ ವ್ಯವಸ್ಥೆಗೊಳಿಸಿದ್ದ 'ವಿಚಾರ ಸರಣಿ' ಕಾರ್ಯಕ್ರಮದಲ್ಲಿ 'ಹವ್ಯಾಸಿ ಪತ್ರಿಕೋದ್ಯಮದ ಇತಿಮಿತಿ' ಎಂಬ ವಿಷಯ ಕುರಿತು ಮಾತನಾಡುತ್ತಿದ್ದರು.

ವೈವಿಧ್ಯಮಯ ವಸ್ತುವಿನ ಆಯ್ಕೆ, ಗ್ರಹಿಕೆಯಲ್ಲಿನ ಸೂಕ್ಷ್ಮತೆ, ವಸ್ತುನಿಷ್ಠ ದೃಷ್ಟಿಕೋನ ಇವು ಹವ್ಯಾಸಿ ಪತ್ರಕರ್ತನನ್ನು ಜನಪ್ರಿಯಗೊಳಿಸಬಲ್ಲವು ಎಂದ ಅವರು, "ಆದರೆ ಹವ್ಯಾಸಿ ಪತ್ರಕರ್ತ ಯಾವುದೇ ಪತ್ರಿಕೆಯ ಉದ್ಯೋಗಿ ಆಗದೇ ಇರುವುದೇ ಆತನಿಗೆ ಕೆಲವು ಇತಿಮಿತಿಗಳನ್ನು ನಿರ್ಮಿಸಿದೆ" ಎಂದರು.

ಕನ್ನಡ ಪತ್ರಿಕೋದ್ಯಮ ಸಾಕಷ್ಟು ಪ್ರಮಾಣದಲ್ಲಿ ಬೆಳೆಯದೇ ಇರುವುದರಿಂದ ಹವ್ಯಾಸಿ ಪತ್ರಿಕೋದ್ಯಮಕ್ಕೆ ಇನ್ನೂ ಭವಿಷ್ಯವಿಲ್ಲವಾಗಿದೆ. ಆದರೆ ಇಂಗ್ಲೀಷ್ ಭಾಷಾ ಪತ್ರಿಕೆಗಳಲ್ಲಿ ಹವ್ಯಾಸಿ ಪತ್ರಿಕೋದ್ಯಮವನ್ನು ಈಗಾಗಲೇ ಗಂಭೀರವಾಗಿ ಪರಿಗಣಿಸಲಾಗುತ್ತಿದೆ ಆಯಾ ಪತ್ರಿಕೆಗಳ ಭಾಷಾ ಶೈಲಿಗೆ ತಕ್ಕಂತೆ ಹವ್ಯಾಸಿ ಪತ್ರಕರ್ತ ಬರಹದ 'ಸರ್ಕಸ್' ಮಾಡಬೇಕಾಗಿರುವುದರಿಂದ ಆತನ ಭಾಷಾ ಸೃಜನಶೀಲತೆ ಬಹುದಿಕ್ಕಿನಲ್ಲಿ ಕಾಣಿಸಿಕೊಳ್ಳುತ್ತದೆ ಎಂದ ಅವರು ವೃತ್ತಿ ಪತ್ರಕರ್ತನಂತೆ ಭಾಷೆಯ ಏಕತಾನತೆಗೆ ಹವ್ಯಾಸಿ ಪತ್ರಕರ್ತ ಕಟ್ಟುಬೀಳಬೇಕಾಗದೇ ಇರುವುದೇ ಅವನ ಹೆಗ್ಗಳಿಕೆ ಎಂದರು.

ಜಿಲ್ಲಾ ವರದಿಗಾರರ ಒಕ್ಕೂಟದ ಅಧ್ಯಕ್ಷ ದಿನೇಶ್ ಪಟವರ್ಧನ್ ಸ್ವಾಗತಿಸಿ, ಕಾರ್ಯದರ್ಶಿ ಕಂ.ಕ. ಮೂರ್ತಿ ವಂದಿಸಿದರು.

ಉಪನ್ಯಾಸ

ಜಿಲ್ಲಾ ವರದಿಗಾರರ ಒಕ್ಕೂಟ 'ವಿಚಾರ ಸರಣಿ' ಕಾರ್ಯಕ್ರಮದ ಅಡಿಯಲ್ಲಿ ಏ. ೬ ರ ಶನಿವಾರ ಸಂಜೆ ೫.೩೦ಕ್ಕೆ ಚಿಕ್ಕಮಗಳೂರಿನ ನಗರಸಭೆ ಆವರಣದಲ್ಲಿ 'ಪತ್ರಕರ್ತನ ಸಾಮಾಜಿಕ ಜವಾಬ್ದಾರಿ' ಎಂಬ ವಿಷಯದ ಬಗ್ಗೆ ಉಪನ್ಯಾಸ ಏರ್ಪಡಿಸಿದೆ

ಅಂದು 'ಪ್ರಜಾವಾಣಿ'ಯ ಚಿತ್ರದುರ್ಗ ಜಿಲ್ಲೆ ವರದಿಗಾರ ಮತ್ತು ಬಂಡಾಯ ಸಾಹಿತ್ಯ ಸಂಘಟನೆಯ ಸಂಚಾಲಕ ಗುಡಿಹಳ್ಳಿ ನಾಗರಾಜ್ ಅವರು ಉಪನ್ಯಾಸ ನೀಡಲಿದ್ದಾರೆ.

ಪ್ರತಿಭೆ—ಪರಿಚಯ

ಮೌರ್ಸಿಂಗ್ ಕಲಾವಿದ ಜಮ್ಮಿಟಿಗೆ ನಾಗರಾಜ್

ಭದ್ರಾವತಿ ಆಕಾಶವಾಣಿಯಲ್ಲಿ ಮೌರ್ಸಿಂಗ್ ವಾದನದ ಕಲಾವಿದನಾಗಿ ಆಯ್ಕೆಯಾಗಿರುವ ಜಮ್ಮಿಟಿಗೆ ಎಸ್. ನಾಗರಾಜ್, ಹರಿಹರಪುರದ ಬಳಿಯ ಜಮ್ಮಿಟಿಗೆಯವರು. ಸುಮಾರು ೧೦ ವರ್ಷಗಳಿಂದಲೂ ಚಿಕ್ಕಮಗಳೂರು, ಶಿವಮೊಗ್ಗ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳ ಹಲವಾರು ಸಂಗೀತ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಶ್ರೋತೃಗಳ ಮೆಚ್ಚುಗೆಗೆ ಪಾತ್ರರಾಗಿದ್ದಾರೆ ಇತ್ತೀಚೆಗೆ, ಹೊರನಾಡು ಅನ್ನಪೂರ್ಣೇಶ್ವರಿ ಸುಪ್ರಭಾತ, ಭಕ್ತಿಗೀತೆಗಳು ಮತ್ತು ಸುಬ್ರಹ್ಮಣ್ಯ ಮಠಾಧೀಶರು ಹಾಡಿದ ಸಂಗೀತದ ಕ್ಯಾಸೆಟ್‌ನಲ್ಲಿ ಮೌರ್ಸಿಂಗ್ ನುಡಿಸಿದ್ದಾರೆ.

ಖ್ಯಾತ ಮೃದಂಗ ವಿದ್ವಾನ್ ಹಾಗೂ ಶಿವಮೊಗ್ಗದ ಕಾಂಚನ ಮೃದಂಗ ಪಾಠಶಾಲೆಯ ಪ್ರಿನ್ಸಿಪಾಲರಾದ ಕಾಂಚನ ವಿ. ಮೂರ್ತಿರಾಯರ ಶಿಷ್ಯರಾಗಿದ್ದಾರೆ. ಈಚೆಗೆ ನಾಗರಾಜರವರ ಮೌರ್ಸಿಂಗ್ ವಾದನ **ಭದ್ರಾವತಿ ಆಕಾಶವಾಣಿಯಲ್ಲಿ ಪ್ರಸಾರವಾಯಿತು**

ಇವರು ಹರಿಹರಪುರದ ಮಲೆನಾಡು ಮಹೋದಯ ಯಕ್ಷಗಾನ ಕಲಾಮಂಡಳಿಯ ವತಿಯಿಂದ ಯಕ್ಷಗಾನ ತಾಳಮದ್ದಲೆ ಕಾರ್ಯಕ್ರಮವನ್ನು ಹಲವಾರು ಕಡೆಗಳಲ್ಲಿ ನೀಡಿದ್ದು, ಈಗಾಗಲೇ ,ಎರಡು ಬಾರಿ ಈ ತಂಡದ ಯಕ್ಷಗಾನ ತಾಳಮದ್ದಲೆ ಕಾರ್ಯಕ್ರಮಗಳು ಆಕಾಶವಾಣಿಯ ಭದ್ರಾವತಿ ನಿಲಯದಿಂದ ಪ್ರಸಾರವಾಗಿವೆ

ವೃತ್ತಿಯಲ್ಲಿ ಹರಿಹರಪುರ ಸಿಂಡಿಕೇಟ್ ಬ್ಯಾಂಕಿನ ಪಿಗ್ಮಿ ಸಂಗ್ರಾಹಕರಾಗಿರುವ ನಾಗರಾಜ್ ಅವರು, ಸಂಗೀತ ಕ್ಷೇತ್ರದಲ್ಲಿ ಅಪರೂಪ ವಾದನವಾದ 'ಮೌರ್ಸಿಂಗ್' ನಲ್ಲಿ ಆಕಾಶವಾಣಿ ಕಲಾವಿದರಾಗಿ ಆಯ್ಕೆಯಾಗಿರುವುದು ಮಲೆನಾಡಿನ ಸಂಗೀತ ಕಲಾಭಿಮಾನಿಗಳಿಗೆ ಹೆಮ್ಮೆಯ ಸಂಗತಿ.

ಈ ಅರಳುವ ಪ್ರತಿಭೆ ಈ ಕ್ಷೇತ್ರದಲ್ಲಿ ಇನ್ನೂ ಹೆಚ್ಚಿನ ಯಶಸ್ಸುಗಳಿಸಲಿ ಎಂದ ಹಾರೈಕೆ.

—ಅಸಗೋಡು ವಸಂತ.

ಓದುಗರ ಪತ್ರಗಳು

"ಎಲ್ಲವೂ ಇದ್ದು ಏನೂ ಇಲ್ಲ"

"ಎಲ್ಲವೂ ಇದ್ದು ಏನೂ ಇಲ್ಲ" ಎಂಬಂಥ ಊರೊಂದು ಕೊಪ್ಪ ತಾಲ್ಲೂಕಿನಲ್ಲಿದೆ. ಅದೇ ಬಸರೀಕಟ್ಟೆ ಎಂಬ ಕುಗ್ರಾಮ.

ಇಲ್ಲಿ ಎಲ್ಲಾ ಊರುಗಳಿಗೂ, ದೊಡ್ಡ ದೊಡ್ಡ ಪೇಟೆಗಳಿಗೂ ಹೋಗುವ ಬಸ್‌ಗಳು ಬೇಕಾದಷ್ಟಿವೆ. ಆದರೆ ಬಸ್ ಸ್ಟ್ಯಾಂಡೇ ಇಲ್ಲ. ಹಾಗೆಯೇ ಎಲ್ಲಾ ಮನೆಗೂ ವಿದ್ಯುದ್ದೀಪವಿದೆ. ಆದರೆ ಕರೆಂಟ್ ಮಾತ್ರ ದಿನದ ೨೪ ಗಂಟೆ ಇರುವುದಿಲ್ಲ! "ನಾನಿಲ್ಲೇನೆ" ಎಂದು ತೋರಿಸಲು ಮಧ್ಯೆ ಮಧ್ಯೆ ೧೦ ನಿಮಿಷ ಬಂದು ಹೋಗಬಹುದು. ಹೆಚ್ಚಿನ ಎಲ್ಲಾ ಮನೆಯಲ್ಲೂ ಟಿ. ವಿ. ಇದೆ. ಆದರೆ ಬರೀ ಟಿ.ವಿ. ನೋಡಬೇಕೇ ಹೊರತು, ಕಾರ್ಯಕ್ರಮ ನೋಡುವಂತಿಲ್ಲ.

ನೀರು ಹೋಗಲು ಚರಂಡಿ ವ್ಯವಸ್ಥೆ ಇದೆ. ಆದರೆ ನೀರೆಲ್ಲ ಹರಿಯುವುದು ರಸ್ತೆಯ ಮೇಲೇ!

ಇದಕ್ಕೆಲ್ಲ ಕಾರಣರಾರು—ನೀವೇ ಹೇಳಿ....

—ಬಿ.ಜಿ. ಶ್ರೀರಂಗ,
ಎಂ. ಕೆ. ಶ್ರೀನಿಧಿ,
ಎಂ. ಜೆ. ಕೃಷ್ಣಮೂರ್ತಿ,
ಬಸರಿಕಟ್ಟೆ.

'ಮಿಂಚು ರೋಗ': ನಾಟಿ ಔಷಧಿ ಹೆಚ್ಚು ಪರಿಣಾಮಕರ

ಪ್ರಿಯರೆ,

ತಾ॥೧೭-೩-೯೧ರ ನಿಮ್ಮ ಪತ್ರಿಕೆಯಲ್ಲಿ ಪ್ರಕಟವಾದ ಸುದ್ದಿ "ಮಿಂಚುರೋಗ: ೪ ದನಗಳ ಹಠಾತ್ ಸಾವು" ಓದಿ ಮನಸ್ಸಿಗೆ ತುಂಬಾ ನೋವಾಯ್ತು. ಈ ಮಿಂಚು ರೋಗ ದನಗಳಿಗೆ ಬಂದಾಗ ತಲೆಯು ಸ್ಥಿಮಿತನಿಲ್ಲದಂತೆ ಅಲ್ಲಾಡಿಸುತ್ತಾ, ನಿಲ್ಲಲಾಗದೇ ಅಡ್ಡಾದಿಡ್ಡಿ ಬೀಳುತ್ತವೆ. ಕಾಲನ್ನು ಗಟ್ಟಿಯಾಗಿ ಊರಲು ಪ್ರಯತ್ನ ನಡೆದರೂ ತಲೆಯನ್ನು ಎತ್ತಲಾಗದೇ ನೆಲದಲ್ಲಿ ತೇಯುತ್ತವೆ. ಈ ಸಂದರ್ಭದಲ್ಲಿ ಹತ್ತಿರದಲ್ಲಿದ್ದರೆ, ದನದ ತಲೆಯು ಆ ಭಾಗ ನೆಲದಲ್ಲಿ ತೇಯದಂತೆ ಹುಲ್ಲಿನ ಮೆತ್ತೆಯನ್ನು ಕೊಟ್ಟು, ದನದ ಕಣ್ಣನ್ನು ಮುಚ್ಚಿ ಬಿಡಬೇಕು.

ನನಗೆ ತಿಳಿದಂತೆ, ಈ ಕಾಯಿಲೆಗೆ ಅಲೋಪತಿಕ್ (ಇಂಗ್ಲಿಷ್) ಔಷಧಕ್ಕಿಂತ ಆಯುರ್ವೇದದ (ಗಿಡಮೂಲಿಕೆ) ಔಷಧ ಶೀಘ್ರ ಪರಿಣಾಮಕಾರಿ. ಆದರೆ ಈ ಔಷಧಿ ನೀಡುವವರು ಎಲ್ಲೆಲ್ಲಿದ್ದಾರೆ ಮತ್ತು ಎಷ್ಟು ಮಂದಿ ಇದ್ದಾರೆ ಎಂಬುದು ಮುಖ್ಯ. ಗಡಿಕಲ್ಲಿನ ಸಮೀಪ ನಗರವಳ್ಳಿ ಎಂಬಲ್ಲಿ ಕೃಷಿಕಾರ್ಮಿಕನಾಗಿರುವ ಒಬ್ಬ ವೃದ್ಧರು ಗಿಡಮೂಲಿಕೆ ಔಷಧಿ ಅವರೇ ನೀಡಿ ಗುಣಪಡಿಸುವರು. ಇವರಿಗೆ ಈಗಾಗಲೇ ೭೧ ೭೫ ವರ್ಷವಾಗಿದ್ದು ಕಣ್ಣು ಸರಿಯಾಗಿ ಕಾಣಿಸುತ್ತಿಲ್ಲವಾದರೂ ನಮ್ಮ ಹಳ್ಳಿಯ ಸುತ್ತಲಿನಲ್ಲಿ ಕರೆದಾಗ ಕಷ್ಟಪಟ್ಟು ಬಂದು ಔಷಧಿ ನೀಡಿ ಮಿಂಚು ಕಾಯಿಲೆಯನ್ನು ಗುಣಪಡಿಸುತ್ತಾರೆ. ಇವರ ಔಷಧಿಯಿಂದ ೬ರಿಂದ ೮ ಗಂಟೆಯೊಳಗೆ ದನ ಯಥಾಸ್ಥಿತಿಗೆ ಬಂದರೂ ಒಂದೆರಡು ದಿನ ಮಂಕಾಗಿರುತ್ತದೆ. ಪ್ರಾರಂಭದ ಹಂತದಲ್ಲಿಯಾದರೆ ಶೀಘ್ರ ಗುಣವಾಗುತ್ತದೆ. ತಡಮಾಡಿದರೆ ಕಾಯಿಲೆ ಉಲ್ಬಣಗೊಳ್ಳುತ್ತದೆ.

ನಮ್ಮ ನೆರೆಯವರ ಗಾಡಿ ಎತ್ತಿಗೆ ನಾಲ್ಕೈದು ವರ್ಷದ ಹಿಂದೆ ಮಿಂಚು ಕಾಯಿಲೆ ಬಂದಾಗ ನಮ್ಮಗಳಿಗೆ ಅದರ ಅರಿವಿಲ್ಲದೇ ವೈದ್ಯರನ್ನು ಕರೆಸಿ ಚಿಕಿತ್ಸೆ ನೀಡಿಸಿದ್ದಾಯಿತು. ಕ್ಯಾಲ್ಸಿಯಂ ಮತ್ತು ಗ್ಲೂಕೋಸ್‌ಗಳ ಇಂಜಕ್ಷನ್‌ನಿಂದ ೨-೩ ದಿನ ಜೀವ ಉಳಿಯಿತಾದರೂ ಕಾಯಿಲೆ ಗುಣವಾಗಲಿಲ್ಲ. ಈ ಜೊತೆಯಲ್ಲಿಯೇ ಈ ವೃದ್ಧರು ಔಷಧಿ ನೀಡುತ್ತಾರೆಂದು ತಿಳಿದು ಅವರನ್ನು ಕರೆತಂದು ಔಷಧಿ ಮಾಡಿಸಿದಾಗ ಕಾಯಿಲೆ ತೀವ್ರ ಸ್ವರೂಪಕ್ಕೆ ಹೋಗಿತ್ತಾದ್ದರಿಂದ ನಿಧಾನವಾಗಿ ಗುಣವಾಗುತ್ತಾ ಬಂದು ಸಂಪೂರ್ಣ ಗುಣವಾಯಿತು. ಇವರ ಬಳಿ ಔಷಧಿ ಪಡೆಯಲು ಹತ್ತು-ಇಪ್ಪತ್ತು ಮೈಲಿಗಳಿಂದ ಜನ ಬರುತ್ತಾರೆ. [illegible] ಯಾಗಲು ಕೆಲವರು ತಿಂಗಳು ಕಾದದ್ದೂ ಇದೆ.

ಇಷ್ಟೇಕೆ ಬರೆದೆನೆಂದರೆ, ಮಿಂಚು ರೋಗಕ್ಕೆ ಗಿಡಮೂಲಿಕೆ ಕೊಡುವವರು ಇದ್ದಲ್ಲಿ ಅವರಿಂದಲೂ ಚಿಕಿತ್ಸೆ ಮಾಡಿಸಿದರೆ ಜೀವಕ್ಕೆ ಅಪಾಯವಿಲ್ಲ. ಅಲೋಪತಿ ಚಿಕಿತ್ಸೆ ಈ ಕಾಯಿಲೆಗೆ ಅಷ್ಟಾಗಿ ಯಶಸ್ವಿಯಾಗುವಂತೆ ಕಂಡುಬರುವುದಿಲ್ಲ. ಎರಡೂ ಚಿಕಿತ್ಸೆಗಳನ್ನೂ ಒಟ್ಟಿಗೆ ಮಾಡಿಸಿದರೂ ಆಗುತ್ತದೆ.

—ಹೊಕ್ಕಳಿಕೆ ರಮೇಶ್,
ಗಡಿಕಲ್ಲು, ಕೊಪ್ಪ ತಾ॥

ವಜ್ರ ಮಹೋತ್ಸವದ ಕೊಪ್ಪ ಕೃಷಿ ಬ್ಯಾಂಕ್ ಕೇವಲ ಒಂದು ಪಕ್ಷದ ಸೊತ್ತೇ?

ಪ್ರಿಯರೆ,

ಕೊಪ್ಪದ ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಬ್ಯಾಂಕು ವಜ್ರಮಹೋತ್ಸವ ಆಚರಿಸುತ್ತಿರುವುದು ತಾಲ್ಲೂಕಿನ ಎಲ್ಲ ಸಹಕಾರಿಗಳಿಗೂ ಹೆಮ್ಮೆಯ ಸಂಗತಿ. ಆದರೆ, ಇದೇ ತಾ॥ ೩೧-೩-೯೧ರಂದು ನಡೆಯುತ್ತಿರುವ ಮಹೋತ್ಸವಕ್ಕೆ ಕೇವಲ ಒಂದೇ ಪಕ್ಷದ ಸದಸ್ಯರನ್ನು ಆಹ್ವಾನಿಸಿರುವುದು ಮಾತ್ರ ವಿಷಾದಕರ. ಬ್ಯಾಂಕಿನ ಹಾಲಿ ಅಧ್ಯಕ್ಷರು ಆ ಪಕ್ಷದ ಸದಸ್ಯರಾಗಿರಬಹುದು ಹಾಗೂ ಹಾಲಿ ಶೃಂಗೇರಿ ಕ್ಷೇತ್ರದ ಶಾಸಕರ ಜೊತೆ ವೈಯಕ್ತಿಕ ವಿರಸ ಹೊಂದಿರಬಹುದು. ಆದರೆ ಅದನ್ನು ಸಂಸ್ಥೆಯ ಇಂಥ ಕಾರ್ಯಕ್ರಮಕ್ಕೆ ಎಳೆದು ತಂದಿರುವುದು ವಿಷಾದಕರ.

ಈ ಸಂಸ್ಥೆ ಈ ಮಟ್ಟಕ್ಕೇರಲು ಸ್ಥಾಪಕರಾದ ಹೊಸಕೊಪ್ಪ ಕೃಷ್ಣರಾಯರಂತೆಯೇ ಈಚೆಗೆ ಬಿ.ಜಿ. ಚಿದಂಬರ್, ಎ. ಪಿ. ರಾಮಕೃಷ್ಣನಾಯಕ್, ಯು. ಎಸ್. ಶಿವಪ್ಪ, ಕುಸುರಿಗೆ ಕೃಷ್ಣಪ್ಪ, ಬಿ.ಎಸ್. ಶ್ರೀನಿವಾಸ ರಾವ್, ಕೋದಂಡರಾಮ ಭಟ್ ಮುಂತಾಗಿ ಎಲ್ಲ ಪಕ್ಷಗಳ ಮುಖಂಡರು. ಅಧ್ಯಕ್ಷರಾಗಿ ದುಡಿದುದರಿಂದ ಸಾಧ್ಯವಾಗಿದೆ. ಕಳೆದ ವರ್ಷ ಶಿವಮೊಗ್ಗದ ಮ್ಯಾಮ್ಕೋಸ್ ಸ್ವರ್ಣ ಮಹೋತ್ಸವಕ್ಕೆ ಮುಖ್ಯಮಂತ್ರಿ, ವಿರೋಧ ಪಕ್ಷದ ನಾಯಕರು [illegible] ಹಾಗೂ ಸ್ಥಳೀಯ ಶಾಸಕರು ಇವರನ್ನೆಲ್ಲ ಪಕ್ಷಭೇದವಿಲ್ಲದೆ ಮುಖ್ಯ ಅತಿಥಿಗಳಾಗಿ ಕರೆಯಲಾಗಿತ್ತು. ಹಾಗೆಯೇ ಇದೀಗ ಈ ಸಮಾರಂಭಕ್ಕೆ ಆಹ್ವಾನಿಸಲ್ಪಟ್ಟಿರುವ ಜನತಾ ದಳದ ಎಂ. ಶಿ. ನಾಣಯ್ಯ ತಾವು ಅಧ್ಯಕ್ಷರಾಗಿರುವ ಅಪೆಕ್ಸ್ ಬ್ಯಾಂಕಿನ [illegible] ಹಬ್ಬಕ್ಕೆ ಆಗಿನ ಮುಖ್ಯಮಂತ್ರಿ, ಸಹಕಾರ ಮಂತ್ರಿಗಳನ್ನು ಆಹ್ವಾನಿಸಿದ್ದರು.

ಇಷ್ಟೆಲ್ಲ ಉದಾಹರಣೆಗಳಿದ್ದರೂ ಈ ಸಮಾರಂಭಕ್ಕೆ ಸ್ಥಳೀಯ ಶಾಸಕರನ್ನು ಆಹ್ವಾನಿಸದಿರುವುದು, ಒಳ್ಳೆಯ ರೀತಿ ನಡೆಯಬೇಕಿದ್ದ ಕಾರ್ಯಕ್ರಮ ಹೀಗೆ ಒಂದು ಪಕ್ಷದ ಸ್ವತ್ತಿಯಂತೆ ನಡೆಸುತ್ತಿರುವುದು ವಿಷಾದಕರ.

—ಕೆ ಎಸ್. [illegible]
ಅಧ್ಯಕ್ಷರು, ವ್ಯ. ಸೇ. ಸ. ಸಂಘ, [illegible]
ಮತ್ತು ಮ್ಯಾಮ್ಕೋಸ್ ನಿರ್ದೇಶಕರು.

ಕಿಗ್ಗ ಮಂಡಲದಲ್ಲಿ ಎರಡು ಪ್ರಮುಖ ಸೇತುವೆಗಳಿಗಾಗಿ ಗ್ರಾಮಸ್ಥರ ಒತ್ತಾಯ

ಶೃಂಗೇರಿ: ಈ ತಾಲ್ಲೂಕಿನ ಮರ್ಕಲ್ (ಕಿಗ್ಗ) ಮಂಡಲದಲ್ಲಿ ೨ ಪ್ರಮುಖ ಕಾಮಗಾರಿಗಳಿಗಾಗಿ ಜನ ಒತ್ತಾಯಿಸಿದ್ದಾರೆ.

ಕೆಲ್ಲಾರಿನಿಂದ ಅಮ್ಮೂರು, ಉದ್ದಪ್ಪನ ಕೊಡಿಗೆ, ಚಟ್ಕಣಿ ಮಾರ್ಗವಾಗಿ ಮಾಗೋಡು ಗಿರಿಜನ ಕೊಡಿಗೆಗೆ ಹೋಗುವ ರಸ್ತೆಯಲ್ಲಿ ನಂದಿನಿ ನದಿಗೆ ಒಂದು ಸೇತುವೆಗಾಗಿ ಆ ಪ್ರದೇಶದ ರೈತಾಪಿ ಜನ ಹಲವಾರು ವರ್ಷಗಳಿಂದ ಬೇಡಿಕೆ ಸಲ್ಲಿಸುತ್ತ ಬಂದಿದ್ದರೂ ಈವರೆಗೂ ಆಗಿಲ್ಲ.

ಇದೇ ರಸ್ತೆಯ ವಾರ್ಷಿಕ ರಿಪೇರಿಯ ಕೆಲಸ ಕೊನೆಯ ೨ ಕಿ.ಮೀ.ನಲ್ಲಿ ಆಗಿದೆ. ಪ್ರಾರಂಭದಲ್ಲಿ ಆಗಿಲ್ಲ. ಈ ಬಗ್ಗೆ ತಾ. ಪಂ. ಸ. ಸಭೆಯಲ್ಲೂ ಚರ್ಚೆಯಾಗಿದ್ದರೂ ಕೆಲಸ ಈಡೇರಿಲ್ಲ

ಹೀಗೆ ರಸ್ತೆ ಸಂಪರ್ಕ ಸರಿಯಿಲ್ಲದಿರುವುದರಿಂದ ಈ ಭಾಗದ ಹತ್ತಾರು ಹಳ್ಳಿಗಳ ಜನಜೀವನ ಬಹಳ ದುರ್ಭರವಾಗಿದೆಯಲ್ಲದೆ, ನೂರಾರು ಮಕ್ಕಳು ಶಾಲಾ ಶಿಕ್ಷಣದಿಂದ ವಂಚಿತರಾಗಿದ್ದಾರೆ ಎಂದು ಜನ ತಿಳಿಸಿದ್ದು, ಕೂಡಲೇ ಈ ಕಾಮಗಾರಿಗಳಿಗಾಗಿ ಒತ್ತಾಯಿಸಿದ್ದಾರೆ.

ನಳಿನಿಗೆ ಸೇತುವೆ

ಇದೇ ರೀತಿ ಕಿಗ್ಗದಿಂದ ಗೋಳಗೋಡು, ಸಿರಿಮನೆ, ಚಟ್ನಮನೆ ಕಡೆ ಹೋಗುವ ರಸ್ತೆಯಲ್ಲಿ ನಳಿನಿ ನದಿಗೆ ಸೇತುವೆ ಬೇಕೆಂಬ ಬೇಡಿಕೆ ಸುವರ್ಣ ಮಹೋತ್ಸವ ಆಚರಿಸುವ ಹತ್ತಿರ ಬರುತ್ತಿದೆ!

ಮಳೆಗಾಲದ ೪ ತಿಂಗಳು ಈ ಭಾಗದ ಹಳ್ಳಿಗರಿಗೆ ತೂಗುವ 'ಸಾರ'ವೇ (ಸಂಕ) ಗತಿ. ಅದಕ್ಕೂ ಈಗ ಸರಿಯಾದ 'ಗಂಡಿ' (ಸಾರ ಹಾಕಬಲ್ಲ ಆಯಕಟ್ಟಿನ ಜಾಗ) ಇಲ್ಲದೆ, ಮಳೆಗಾಲ ಕಳೆಯುವುದೊಂದು ಭಯಂಕರ ಅನುಭವವಾಗಿದೆ.

ಈ ರಸ್ತೆ ಈಚೆಗೆ ಸಾಕಷ್ಟು ಉತ್ತಮ ಸ್ಥಿತಿಯಲ್ಲಿದ್ದು, ಈಗಲಾದರೂ ಸೇತುವೆ ಆದರೆ ರೈತರಿಗೆ ಬಹಳ ಉಪಯುಕ್ತವಾಗುತ್ತದೆಂದು ಅಲ್ಲಿನ ನಾಗರೀಕ ವೇದಿಕೆ ಒತ್ತಾಯಿಸಿದೆ.

ತೀರ್ಥಹಳ್ಳಿಯಲ್ಲಿ ಕ್ಯಾಂಪ್ಕೋ ಅಡಿಕೆ ಖರೀದಿ ನಿಲ್ಲಿಸಬಂದ ಎಪಿಎಂಸಿ ಅಧಿಕಾರಿಗಳಿಗೆ ರೈತರ ಯಶಸ್ವಿ ಘೇರಾವ್

ಕಳೆದ ನವೆಂಬರ್ ೧೫ ರಿಂದ ತೀರ್ಥಹಳ್ಳಿಯ ತಾಲ್ಲೂಕು ಸೊಸೈಟಿಯ ಆಶ್ರಯದಲ್ಲಿ ಪ್ರಾರಂಭಗೊಂಡಿರುವ ಕ್ಯಾಂಪ್ಕೋ ಸಂಸ್ಥೆಯ ಅಡಿಕೆ ಮತ್ತು ಕೋಕೋ ಖರೀದಿ ಕೇಂದ್ರವನ್ನು ಶಿವಮೊಗ್ಗ ಜಿಲ್ಲಾಧಿಕಾರಿಗಳು ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿಯ ಮೂಲಕ ನಿಲ್ಲಿಸಲು ನಡೆಸಿದ ಪ್ರಯತ್ನವನ್ನು ಮಾರ್ಚ್ ೪ರಂದು ಅಡಿಕೆ ಮಾರಾಟಕ್ಕಾಗಿ ಬಂದಿದ್ದ ೨೦೦-೩೦೦ ಮಂದಿ ರೈತರೇ ಅಧಿಕಾರಿಗಳಿಗೆ ಘೇರಾವ್ ಮಾಡಿ ವಿಫಲಗೊಳಿಸಿದರು.

ಅಂದು ಬೆಳಗ್ಗೆ ಶಿವಮೊಗ್ಗ ಮಾರುಕಟ್ಟೆ ಸಮಿತಿಯ ಕಾರ್ಯದರ್ಶಿಯವರು ತಮ್ಮ ಸಿಬ್ಬಂದಿ ವರ್ಗದವರೊಂದಿಗೆ ಇಲ್ಲಿಗೆ ಆಗಮಿಸಿ, ಜಿಲ್ಲಾಧಿಕಾರಿಗಳು ಈ ಅಡಿಕೆ ಖರೀದಿ ಕೇಂದ್ರವನ್ನು ನಿಲ್ಲಿಸುವಂತೆ ತಮಗೆ ಸೂಚಿಸಿ ಕಳುಹಿಸಿದ್ದಾರೆಂದೂ ಅದಕ್ಕಾಗಿ ತಾನು ಬಂದಿರುವುದಾಗಿಯೂ ತಿಳಿಸಿದರು. ಮೊದಲು ಲಿಖಿತ ಮೂಲಕ ಆದೇಶ [illegible] ವುದಾಗಿ ತಿಳಿಸಿ, [illegible] ವೆಂದು ತಿಳಿಸಿ, ಈ ಕೇಂದ್ರ [illegible] ಬದ್ಧವಾಗಿ ನಡೆಯುತ್ತಿದೆಯೆಂದೂ [illegible] ಜಿಲ್ಲಾಧಿಕಾರಿಗಳಿಗೆ ಈ ಬಗ್ಗೆ [illegible] ಮಾಡುವುದಾಗಿಯೂ ತಿಳಿಸಿದರು.


ಈ ಸಂದರ್ಭದಲ್ಲಿ [illegible] ಲ್ಯಾರ್ [illegible] ಜಿಲ್ಲಾಧಿಕಾರಿಗಳಿಗೆ ಈ ಕೇಂದ್ರದಿಂದ ರೈತ [illegible] [illegible] ಸ್ಪಷ್ಟವಾಗಿ ತಿಳಿಸಿದರು. [illegible] [illegible] ಎಂ. [illegible] ರಾವ್, ಮಾರುಕಟ್ಟೆ [illegible] ಕೆ. ಜಿ. [illegible] ಭಾರತೀಯ [illegible] ತಾಲ್ಲೂಕು [illegible] [illegible] ಜನರಿಗೆ [illegible] ಎಂದು ತಿಳಿಸಿ, ಕ್ಯಾಂಪ್ಕೋ [illegible] ರೈತರಿಗೆ [illegible]

(ಓದಿ ಪುಟಕ್ಕೆ)

ಆಕಾಶವಾಣಿಯಲ್ಲಿ ಚಂಡೆ ಮದ್ದಲೆ

ಚಂಡೆ–ಮದ್ದಲೆಯ ಅಂತರಂಗ' ಎಂಬ ಯಕ್ಷಗಾನ ಕುರಿತ ರೂಪಕ ಭದ್ರಾವತಿ ಆಕಾಶವಾಣಿಯಲ್ಲಿ ಏ ೧೮ ರ ಬದಲು ಏ ೫ ರ ರಾತ್ರಿ ೯–೩೦ಕ್ಕೆ ಪ್ರಸಾರವಾಗಲಿದೆ.

ಅಭಿನಂದನೆಗಳು



1985–86ರಲ್ಲಿ ಶೃಂಗೇರಿ ಜೇಸಿ ಸಂಸ್ಥೆಯ ಸ್ಥಾಪಕರು ಹಾಗೂ 87–88ರಲ್ಲಿ ರಾಜ್ಯಾಧ್ಯಕ್ಷರಿಂದ ಪ್ರಶಸ್ತಿ ಪಡೆದು ಈ ಬಾರಿ ಗೋವಾದಲ್ಲಿ ನಡೆದ ರಾಷ್ಟ್ರಮಟ್ಟದ ಸಮ್ಮೇಳನದಲ್ಲಿ ಶೃಂಗೇರಿ ಘಟಕಕ್ಕೆ ಪ್ರಥಮ ಬಾರಿಗೆ ರಾಷ್ಟ್ರ ಪ್ರಶಸ್ತಿ ಗಳಿಸಿ, ಶೃಂಗೇರಿಯ ಜೂನಿಯರ್ ಛೇಂಬರ್‌ಗೆ ಕೀರ್ತಿ ತಂದ 90–91ರ ಶೃಂಗೇರಿ ಜೇಸಿ ಅಧ್ಯಕ್ಷ

ಜೇಸಿ ಎಂ. ಕೆ. ಕುಮಾರಸ್ವಾಮಿ

ಇವರಿಗೆ ಹೃತ್ಪೂರ್ವಕ ಅಭಿನಂದನೆಗಳು

ಜೇಸಿ ಬಂಧುಗಳು ಮತ್ತು ಆತ್ಮೀಯ ಸ್ನೇಹಿತರು. ಶೃಂಗೇರಿ.

ರೈತರ ಯಶಸ್ವಿ ಘೇರಾವ್

(೫ನೇ ಪುಟದಿಂದ)

ಪ್ರಾರಂಭದಿಂದಲೂ ಇಲ್ಲಿನ ಅಡಿಕೆ ಕೇಂದ್ರವನ್ನು ಮುಚ್ಚಿಸಬೇಕೆಂಬ ಪ್ರಯತ್ನವನ್ನು ಶಿವಮೊಗ್ಗದ ಪ್ರಭಾವಿ ಅಡಿಕೆ ಮಂಡಿ ಮಾಲೀಕರು ನಡೆಸುತ್ತಿದ್ದು, ಈ ನಿಟ್ಟಿನಲ್ಲಿಯೇ ಈ ಪ್ರಯತ್ನ ನಡೆಯುತ್ತಿದೆ. ತಾಲ್ಲೂಕಿನ ರೈತ ವರ್ಗ ಸಂಘಟಿತವಾಗಿ ಹೋರಾಟದ ಮೂಲಕ ಇಂತಹ ಯತ್ನವನ್ನು ನಿಲ್ಲಿಸಬೇಕೆಂದು ತಾಲ್ಲೂಕು ಸೊಸೈಟಿ ಅಧ್ಯಕ್ಷ ಕೆ. ನರಸಿಂಹ ನಾಯಕ್ ಕರೆ ನೀಡಿದ್ದಾರೆ.

ತಾಲ್ಲೂಕಿನ ರೈತ ವರ್ಗದ ಸಹಕಾರದಿಂದ ಈವರೆಗೆ ಸುಮಾರು ೧ ಕೋಟಿ ೪೦ ಲಕ್ಷ ರೂಪಾಯಿಗಳ ಅಡಿಕೆ ಖರೀದಿ ವ್ಯವಹಾರದ ದಾಖಲೆಯನ್ನು ಸ್ಥಾಪಿಸಿದ ಈ ಸಂಸ್ಥೆಯು ರೈತರ ಸಹಕಾರದಿಂದಲೇ ನಡೆಯುತ್ತಿದೆ. ಇದನ್ನು ಕಂಡು ಸಹಿಸದ ಬಂಡವಾಳಶಾಹಿಗಳ ಶಕ್ತಿಯನ್ನು ಈ ತಾಲ್ಲೂಕಿನ ಜನ ಒಟ್ಟಾಗಿ ಖಂಡಿಸಬೇಕಾಗಿದೆ. ಏನೇ ಆದರೂ ಇಲ್ಲಿನ ಅಡಿಕೆ ಖರೀದಿ ಕೇಂದ್ರವನ್ನು ಯಾವ ಕಾರಣಕ್ಕೂ ನಿಲ್ಲಿಸುವುದಿಲ್ಲವೆಂದು ಅಧ್ಯಕ್ಷರು ತಿಳಿಸಿದ್ದಾರೆ.

ಕಳ್ಳಕೊಯ್ತಕ್ಕೆ ದಂಡ ; ನಾಟ ಮುಟ್ಟುಗೋಲು

ಬಂಡಿಗಡ : ಇಲ್ಲಿಗೆ ಸಮೀಪದ ಹೊಸೂರಿನ ಸ ನಂ ೧೯೦ರ ಸರ್ಕಾರಿ ಕಾಡಿನಲ್ಲಿ ಎಚ್. ಎ. ಕಳಸಪ್ಪ ಗೌಡರ ಮಕ್ಕಳಾದ ರವೀಂದ್ರ, ಸುರೇಶ ಎಂಬವರು ಮಾರಾಟಕ್ಕಾಗಿ ನೇರಲ ಮರದ ೪ ದಿಮ್ಮಿಗಳನ್ನು ಕಡಿದು ಕೊಯ್ತಕ್ಕೆ ಸಿದ್ಧ ಮಾಡಿಟ್ಟಿದ್ದನ್ನು ಫಾರೆಸ್ಟರ್ ಖುದ್ದೂಸ್ ಮತ್ತು ಗಾರ್ಡ್ ಶೇಖರ್ ಮುಟ್ಟುಗೋಲು ಹಾಕಿಕೊಂಡಿದ್ದು, ಕೊಪ್ಪ ವಲಯ ಅರಣ್ಯಾಧಿಕಾರಿಗಳು ಇವರಿಗೆ ೧೫೦ ರೂ. ದಂಡ ವಿಧಿಸಿದ್ದಾರೆ.

ಕಲ್ಕುಳಿ ಚಿನ್ನಯ್ಯ ಹೆಗ್ಡೆ ನಿಧನ

ಶೃಂಗೇರಿ : ಇಲ್ಲಿಗೆ ಸಮೀಪದ ಕಲ್ಕುಳಿಯ ಕೆ. ಸಿ. ಚಿನ್ನಯ್ಯ ಹೆಗ್ಡೆ ಮಾ. ೧೫ ರಂದು ನಿಧನರಾದರು ಪತ್ನಿ ಮತ್ತು ೬ ಜನ ಮಕ್ಕಳನ್ನು ಅಗಲಿರುವ ಇವರಿಗೆ ೭೦ ವರ್ಷ ವಯಸ್ಸಾಗಿತ್ತು.

ಹಿಂದಿನ ಬೆಟ್ಟಗೆರೆ ಪಂಚಾಯ್ತಿ ಅಧ್ಯಕ್ಷರಾಗಿದ್ದ ಅವರು ಈಗಿನ ಮೆಣಸೆ ಮಂಡಲ ಪಂಚಾಯ್ತಿ ಸದಸ್ಯರಾಗಿದ್ದರು.

ಅಡಿಕೆ ಧಾರಣೆ

ಶಿವಮೊಗ್ಗ ೨೯-೩-೯೧

ಸರಕು : ೭೮೦೧–೮೬೦೯

ಬೆಟ್ಟೆ : ೬೮೧೦–೭೪೫೫

ಗೊರಬಲು : ೩೯೭೩–೪೪೧೯

ಬಹಿರಂಗ ಪ್ರಕಟಣೆ

ಸಿಂಡಿಕೇಟ್ ಬ್ಯಾಂಕ್, ಬಸರಿಕಟ್ಟೆ ಶಾಖೆ
ಕೊಪ್ಪ ತಾಲ್ಲೂಕು. .... ವಾದಿ

ಹಾ ಗೂ

ಶ್ರೀ ಜಿ. ಎಸ್. ಅನಂತರಾವ್, ಶ್ರೀ ಜಿ ಎಸ್. ರವೀಂದ್ರ ಮತ್ತು ಶ್ರೀ ಜಿ. ಎಸ್. ನಟರಾಜ್
ಗುಡ್ಡೇತೋಟ, ಕೊಪ್ಪ ತಾಲ್ಲೂಕು. .... ಪ್ರತಿವಾದಿಯರು

ವಾದಿ ಬ್ಯಾಂಕಿನವರು ಚಿಕ್ಕಮಗಳೂರು ಸಿವಿಲ್ ಜಡ್ಜ್‌ರವರ ಕೋರ್ಟಿನಲ್ಲಿ ಓ. ಎಸ್. 127/87, ಎಕ್ಸ್ ಕೇಸ್ 153/89 ರನ್ವಯ ಕಾರ್ಯ ನಿರ್ವಹಣಾ ವ್ಯಾಜ್ಯವನ್ನು ದಾಖಲು ಮಾಡಿದ್ದಾರೆ. ಕೆಳಗೆ ವಿವರಿಸಲಾದ ಫಲವತ್ತಾದ ಅತ್ಯುತ್ತಮ ನೀರಾವರಿ ಸೌಕರ್ಯವುಳ್ಳ ಜಮೀನಿನ ಮೇಲೆ ಪ್ರತಿವಾದಿಗಳಿಗೆ ಇರುವ ಹಕ್ಕು, ಅಧಿಕಾರ ಮತ್ತು ಹಿತಾಸಕ್ತಿಗಳ ಬಹಿರಂಗ ಹರಾಜು ನಡೆಸುವಂತೆ ಕೋರ್ಟ್ ಆಜ್ಞೆ ಮಾಡಿದೆ ಈ ಹರಾಜು ಸ್ಥಳದಲ್ಲಿ ತಾ. 6–4–1991 ರಂದು ಪೂರ್ವಾಹ್ನ 11–00 ಗಂಟೆಗೆ ನಡೆಯುವುದು. ಮತ್ತು ತಾ 12–4–1991 ರಂದು ಮೇಲಿನ ಕೋರ್ಟಿನಲ್ಲಿ ಅಂತಿಮ ಹರಾಜು ಸಾರಲಾಗುವುದು.

ಆಸಕ್ತಿಯುಳ್ಳವರು ಹೆಚ್ಚಿನ ವಿವರಗಳಿಗೆ ಬ್ಯಾಂಕಿನ ಶಾಖಾಧಿಕಾರಿಗಳನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಪ್ರಥಮವಾರು ಮೌಲ್ಯ ರೂ. 1.50 ಲಕ್ಷ (ರೂಪಾಯಿ ಒಂದು ಲಕ್ಷ ಐವತ್ತು ಸಾವಿರ ಮಾತ್ರ.)

ಆಸ್ತಿ ವಿವರ

ಕೊಪ್ಪ ತಾಲ್ಲೂಕಿನ, ಗುಡ್ಡೆತೋಟ ಗ್ರಾಮದ ಕೆಳಗೆ ಕಾಣಿಸಿದ ಸ್ಥಿರಾಸ್ತಿಗಳು.

ಸರ್ವೆ ನಂ.	ವಿವರ	ವಿಸ್ತೀರ್ಣ
74/P	ಬಾಗಾಯ್ತು	2.37 ಎಕರೆ
63/P	ತರಿ	8.31 ಎಕರೆ
		(25 ಗುಂಟೆ ಖರಾಬು ಸೇರಿ)

(ಸಹಿ)
ಡಿ. ಎಲ್. ಕೃಷ್ಣಸ್ವಾಮಿ,
ವಕೀಲರು, ಚಿಕ್ಕಮಗಳೂರು.

ಬಸರಿಕಟ್ಟೆ
18–3–1991

(ಸಹಿ)
ಶಾಖಾಧಿಕಾರಿ
ಸಿಂಡಿಕೇಟ್ ಬ್ಯಾಂಕ್, ಬಸರಿಕಟ್ಟೆ.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿರಿಮನೆ ನಾಗರಾಜ್, ಅಚ್ಚು : ದೀಪಟಿಗೆ ಅಚ್ಚುಕೂಟ, ಕೊಪ್ಪ